ಮಾಡಬಹುದೆಂಬುದು. ಆದರ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದಾರೆ. ಎರಡು ಈ ಸಂಪನ್ನು ಮಾಡುತ್ತಿರುವ ಕಾರ್ಮಿಕರಲ್ಲಿ ಭಯವನ್ನು ಉತ್ಪಾದನೆ ಮಾಡುವ ದೃಷ್ಟಿಯಿಂದ ಇದರ ಆಡಳಿತಮಂಡಳಿ ಪೋಲೀಸರ ಸಹಾಯವನ್ನು ಪಡೆದು ಅವರ ಮೇಲೆ ದಬ್ಬಾಳಿಕೆ ಮಾಡಿದ್ದಾರೆ. ಅವರನ್ನು ಹೊಡೆದಿದ್ದಾರೆ ಎನ್ನುವ ವಿಷಯ. ಈ ಸಂಬಂಧದಲ್ಲಿ ಮೂವರು ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದಕ್ಕೆ ಮಾನ್ಯ ಸಚಿವರು ಹೇಳಿದರು ಈಗಲಾಟೆ ನಡೆದದ್ದು ಹಿಂದೆ, ನಾನು ಮಂತ್ರಿಯಾದ ಮೇಲೆ ಈ ರೀತಿ ನಡೆದಿಲ್ಲವೆಂದು ಹೇಳಿದರು. ಸಂತೋಷ. ಆದರೆ ತಮ್ಮ ಜಾಗದಲ್ಲಿ ಯಾರೇ ಮಂತ್ರಿಗಳು ಇದ್ದರೂ ಕೂಡ ಆಶ್ವಾಸನೆಗಳನ್ನು ಕೊಡುತ್ತಿದ್ದರು. ಅದು ಕೊಡುವ ಪದ್ಧತಿ. ಆದ್ದರಿಂದ ಕೊಡುತ್ತಾರೆ. ಯಾವಾಗಲೂ ಮಂತ್ರಿಗಳಿಂದ ಸಿಗುವುದು ಒಂದೇ ತರಹದ ಆಶ್ವಾಸನೆ. ಅದೇನೆಂದರೆ ಪೋಲೀಸಿನವರು ನಿರ್ದಿಷ್ಟವಾಗಿ ನನಗೆ ಖಚಿತವಾದ ಮಾಹಿತಿಯನ್ನು ಕೊಟ್ಟರೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ನಾನು ಹಿಂಜರಿಯುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಆದಕ್ಕೆ ನಾನು ಹೇಳಂವುದು ಏನೆಂದರೆ, ಈ ಸದನದ ಸದಸ್ಯರು ಈ ವಿಷಯವನ್ನು ಸದನದಲ್ಲಿ ತಂದಿದ್ದಾರೆ. ಇದಕ್ಕೆ ಮಂತ್ರಿಗಳು ಈ ರೀತಿಯ ಆಶ್ವಾಸನೆಯನ್ನು ಕೊಡುವ ಬದಲು ಅವರೇ ಮಾಹಿತಿಯ ಆಧಾರದ ಮೇಲೆ ತಪಿತಸ್ಥರು ಯಾರು ಎಂಬುದನ್ನು ತಿಳಿದುಕೊಂಡು ತಕ್ಷಣ ಕ್ರಮವನ್ನು ಕೈಗೊಳ್ಳಬೇಕು. ತಾವೇ ಸ್ವತಃ ಆಸ್ತೆ ವಹಿಸುತ್ತೀರೆಂದು ತಿಳಿದುಕೊಂಡಿದ್ದೇನೆ. ತಾವು ಇದಕ್ಕಿಂತಲೂ ಹೆಚ್ಚಿನ ಗುಣಮಟ್ಟದ ಭರವಸೆಯನ್ನು ಕೊಡುತ್ತೀರೆಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.— ಸನ್ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯಂಗಳನ್ನು ಗಮನದಲ್ಲಿ ಇಟ್ಟುಕೊಂಡು ಏನು ಅಲ್ಲಿ ಹೊಡೆದಾಟ ಆಗಬತ್ತಾ ಇದೆ ಅದರ ಬಗ್ಗೆ ವರದಿಯನ್ನು ತರಿಸಿಕೊಂಡು, ಯಾವ ರೀತಿಯಿಂದಲೂ ಕಾರ್ಮಿಕರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳುವ ಆಶ್ವಾಸನೆಯನ್ನು ಈ ಸದನದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ.

(ii) *Closure of Publication of Samyukta Karnataka.*

SRI A LAKSHMISAGAR.—I call the attention of the Hon. Minister for Labour to the matter arising out of the closure of 'Samyukta Karnataka' Kannada Daily, Bangalore Edition.

SRI C. M. IBRAHIM (Minister for Labour).—I wish to make the following statement:

The management of M/s. Jai Karnataka News Printers Limited by their notice dated 31-1-1980 declared closure of the Bangalore Unit of Samyukta Karnataka, a Kannada Daily Newspaper. The management have two Units, one at Bangalore and other at Hubli. The Unit at Hubli is working normally. The reasons given for the closure of the Bangalore Unit is "unavoidable circumstances beyond their control".

Originally the above newspaper was owned by Lok Shikshana Trust at Hubli and subsequently it was sold to Karnataka Patrika Private Limited. The present owners, *i.e.*, Jai Karnataka News Printers Limited, purchased the same later In the above sale and purchase transanctions, there are several litigations and as result the sale of newspaper by the Lok Shikshana Trust to Karnataka Pathrika has been impeached. As a result the subsequent sale by Karnataka Pathrika (Pvt.) Limited to Jai Karnataka News Printers also is said to be void in law. The suits are pending before the High Court of Karnataka. The management reported that they are not in

a position to pay the arrears of rent as ordered by the High Court of Karnataka and in addition losses sustained by the Bangalore Unit. The closure has become operative from 1-2-1980.

The office bearers of Bangalore Newspaper Employees Union requested the Commissioner of Labour to intervene in the matter and the matter is taken up in conciliation by the Assistant Labour Commissioner, Bangalore Division-II. Conciliation Meetings have been held on 2-2-1980, 4-2-1980, 7-2-1980, 11-2-1980 and 18-2-1980. The management of Jai Karnataka News Printers have stated that they are not in a position to re-open the above Unit under any circumstances but they have said that they have got an open mind to co-operate with any body coming forward with a scheme to restart the Unit. About 200 workers including journalists have been affected by this closure and they are urging for immediate restoration of the paper. The parties have requested for further adjournment for bilateral talks.

† ಶ್ರೀ ಎ. ಲಕ್ಷ್ಮಸಾಗರ್.—ಮಾನ್ಯ ಮಂತ್ರಿವರ್ಯರು ಏನಾದರೂ ಸಂಧಾನ ನಡೆಸಿ ಈ ಪತ್ರಿಕೆ ನಡೆಯುವಂತೆ ಅನುಕೂಲ ಮಾಡಿದ್ದಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರ ಹೇಳಿಕೆಯಲ್ಲಿ ಎರಡು-ಮೂರು ಸಲ ಸಂಧಾನ ನಡೆದಿದೆ ಎಂಬುದಾಗಿ ಮಾತ್ರ ತಿಳಿಸಿದ್ದಾರೆ. ಇದರಲ್ಲಿ ಬಹಳ ಮುಖ್ಯವಾದ ವಿಚಾರ ಇದೆ. ಈ ಒಂದು ಪತ್ರಿಕೆ ಸುಮಾರು ೫೦ ವರ್ಷಗಳಿಂದಲೂ ನಡೆದುಕೊಂಡು ಬಂದಿರತಕ್ಕಂತಹದ್ದು. ಅನೇಕ ವ್ಯವಹಾರಗಳಿಂದ ಮತ್ತು ಈ ಪತ್ರಿಕೆಯನ್ನು ನಡೆಸತಕ್ಕಂತಹ ಜವಾಬ್ದಾರಿಯನ್ನು ಪದೇ ಪದೇ ಬದಲಾವಣೆ ಮಾಡಿದ ಕಾರಣವೂ, ಅಥವಾ ಬೇರೆ ಇನ್ನು ಏನು ಕಾರಣವೂ ನನಗೆ ತಿಳಿಯದು, ಈ ಒಂದು ಪತ್ರಿಕೆಯನ್ನು ನಡೆಸತಕ್ಕಂತಹ ಜನ ಏನಿದ್ದಾರೆ ಅವರು ಇದರಿಂದ ನಮಗೆ ನಷ್ಟವಾಗಿದೆ, ಆದ್ದರಿಂದ ಇನ್ನು ಮುಂದೆ ನಡೆಸುವುದಕ್ಕಾಗುವುದಿಲ್ಲ ಎನ್ನತಕ್ಕಂತಹ ಒಂದು ಅಭಿಪ್ರಾಯವನ್ನು ಹೇಳಿ ವಿಕಾಪಿಕೆ ಬೆಂಗಳೂರಿನಿಂದ ಮುದ್ರಣವಾಗುತ್ತಿದ್ದಂತಹ ಯೂನಿಟ್‌ನ್ನು ನಿಲ್ಲಿಸಿದ್ದಾರೆ. ಇದರಲ್ಲಿ ಬಹಳ ಮುಖ್ಯವಾದ ವಿಚಾರಗಳಿವೆ. ಬರೀ ೩೦೦ ಜನ ಪತ್ರಿಕೋದ್ಯಮಿಗಳಿಗೆ ಕೆಲಸ ಇಲ್ಲದೇ ಇರುವುದು ಒಂದು ಮಾತ್ರವಲ್ಲದೆ. ಈ ಒಂದು ವೃತ್ತ ಪತ್ರಿಕೆಯಿಂದ ಜನಗಳಿಗೆ ಬೇಕಾಗಿದ್ದಂತಹ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗದೇ ಇರುವುದು ಅತಿ ಮುಖ್ಯವಾದುದು. ಮತ್ತೆ ಪತ್ರಿಕಾ ವೃತ್ತಿಗೆ ಸಂಬಂಧಪಟ್ಟಂತಹ ಜನಕ್ಕೂ ಕೂಡ ತೊಂದರೆಯಾಗಿದೆ. ಈ ಎಲ್ಲ ವಿಚಾರಗಳನ್ನು ಗಮನಕ್ಕೆ ತೆಗೆದು ಕೊಂಡರೆ ನಮ್ಮ ಮಾನ್ಯ ಮಂತ್ರಿವರ್ಯರು ಹೇಳಿದಂತಹ ಸೂತ್ರದಿಂದ ಈ ಪತ್ರಿಕೆ ಮತ್ತೆ ಪ್ರಾರಂಭವಾಗುವುದಕ್ಕೆ ಅನುಕೂಲವಾಗುವುದಿಲ್ಲ ಎಂಬುದಾಗಿ ನಾನು ಅಂದುಕೊಂಡಿದ್ದೇನೆ. ಇಲ್ಲಿ ಬಂದಿರತಕ್ಕಂತಹ ಸಮಸ್ಯೆ ಬಹಳ ಜಟಿಲವಾಗಿದೆ ಎಂಬ ವಿಚಾರವನ್ನೂ ಸಹ ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸಂಬಂಧಪಟ್ಟಂತಾಗೆ ಕರ್ನಾಟಕ ಹೈಕೋರ್ಟ್‌ನಲ್ಲಿ ಮತ್ತು ಧಾರವಾಡ ಜ್ಯುಡಿಷಿಯಲ್ ಜಡ್ಜ್‌ಮೆಂಟ್ ಕೋರ್ಟ್‌ನಲ್ಲೂ ಕೂಡ ಇದರ ಬಗ್ಗೆ ಕೇಸುಗಳು ಇವೆ. ಹಲವಾರು ಜನ ಇಲ್ಲಿ ಭಾಗಿಗಳಾಗಿದ್ದಾರೆ. ಕೇಸುಗಳು ಹಲವಾರು ಹಂತದಲ್ಲಿವೆ. ಇಂತಹ ಒಂದು ಸನ್ನಿವೇಶದಲ್ಲಿ ಮ್ಯಾನೇಜ್‌ಮೆಂಟ್‌ನವರು ನನಗೆ ಇದರಿಂದ ನಷ್ಟವಾಗಿದೆ, ಈ ನಷ್ಟವನ್ನು ಮುಂದೆ ಭರಿಸುವುದಕ್ಕಾಗುವುದಿಲ್ಲ, ಆದ್ದರಿಂದ ನಾನು ಇದನ್ನು ನಿಲ್ಲಿಸಿದ್ದೇನೆ ಎಂಬುದಾಗಿ ತಿಳಿಸಿದ್ದಾರೆ. ಈ ಬಗ್ಗೆ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಎಲ್ಲ ಪ್ರಸಂಗಗಳನ್ನು ಕೂತು ವಿಚಾರ ಮಾಡಿ, ಅದಕ್ಕೆ ಬೇಕಾಗುವಷ್ಟು ಉತ್ತರಗಳನ್ನು ಕಂಡು ಒಡಿಯುವುದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳಲಿ. ಆದರೆ ಮುಚ್ಚಿರತಕ್ಕಂತಹ ಪತ್ರಿಕೆಯ ಮುದ್ರಣವನ್ನು ಪುನಃ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಏನು ಯೋಚನೆ ಮಾಡಿದೆ ? ಬರೀ ಸಂಧಾನದಿಂದ

† Indicates that remarks or speeches have not been revised by the member concerned.

ತಕ್ಷಣದಲ್ಲಿ ಆದು ಸಾಧ್ಯವಾಗಂವುದಿಲ್ಲ ಎಂಬ ವಿಚಾರ ಎಲ್ಲರಿಗೂ ತಿಳಿದಿದೆ. ಇದರಲ್ಲಿ ಮೂರು ವಿಧಾನ ಗಳಿವೆ, ಸಾಮ, ದಾನ, ಹಾಗೂ ಭೇಧ ಈ ಮೂರು ಮಾರ್ಗಗಳಲ್ಲಿ ಕೊನೆಯದನ್ನು ಬಿಟ್ಟುಬಿಡುತ್ತೇನೆ. ಆದರೆ ಉಳಿದ ಮೊದಲೆರಡು ಉಪಯೋಗಗಳನ್ನು ಈ ಸಂದರ್ಭದಲ್ಲಿ ಸರ್ಕಾರ ತೀವ್ರವಾಗಿ ಗಣನೆಗೆ ತೆಗೆದುಕೊಂಡು ಈ ಪತ್ರಿಕೆಯ ಬೆಂಗಳೂರು ಯೂನಿಟ್ ಮುದ್ರಣ ನಿಂತಿರುವುದನ್ನು ಪುನಃ ಶುರು ಮಾಡುವುದಕ್ಕೆ ಸಹಾಯ ಮಾಡುವುದಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಇರತಕ್ಕಂತಹ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂಬುದಾಗಿ ನಾನು ಅವರಲ್ಲಿ ಹೇಳ ಬಯಸುತ್ತೇನೆ. ಇದಕ್ಕೆ ಎಲ್ಲರೂ ಸಮ್ಮತಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ಬಗ್ಗೆ ನಾನು ತಿಳಿದುಕೋಡಿರತಕ್ಕಂತಹ ಮಾಹಿತಿ ಪ್ರಕಾರ ಮತ್ತೆ ಇದಕ್ಕೆ ಸಂಬಂಧಪಟ್ಟಂತಹ ಪತ್ರಿಕಾ ವರದಿ ಗಾರರ ಜೊತೆಯಲ್ಲಿ ಮಾತನಾಡಿದ ಪರಿಣಾಮವಾಗಿ, ಇದಕ್ಕೆ ಕಾನೂನಿನ ತೊಡಕಿದೆ ಎಂದು ಕಂಡು ಬಂದಿದೆ. ಇವೆಲ್ಲವುಗಳನ್ನು ನಾವು ಗಮನಕ್ಕೆ ತೆಗೆದುಕೊಂಡು ಸರ್ಕಾರ ನಂತರ ತೀರ್ಮಾನ ಮಾಡಲಿ. ಆದರೆ ಇದರ ವಹಿವಾಟನ್ನು ನಡೆಸತಕ್ಕಂತಹವರನ್ನು ಕರೆಸಿ ಅವರ ಜೊತೆಯಲ್ಲಿ ಮಾತನಾಡಿ ಈ ಒಂದು ಪತ್ರಿಕೆಯನ್ನು ಪುನಃ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿರತಕ್ಕಂತಹ ತೊಡಕುಗಳನ್ನು ನಿಧಾನವಾಗಿ ಬಿಡಿಸೋಣ. ಇದರ ಬಗ್ಗೆ ಸರ್ಕಾರ ಎಲ್ಲರೊಡನೆ ಒತ್ತಡ ಹಾಕಿದರೆ ಇವೆಲ್ಲವನ್ನೂ ನಿಧಾನವಾಗಿ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ.

ಇನ್ನು ಮೂರನೆಯದಾಗಿ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿರುವ ಯೂನಿಟ್‌ನಲ್ಲಿ ನಷ್ಟವಾಗುತ್ತಿದೆ, ಹುಬ್ಬಳ್ಳಿಯಲ್ಲಿ ಪ್ರಕಟವಾಗುತ್ತಿರುವ ಯೂನಿಟ್‌ನಲ್ಲಿ ನಷ್ಟವಾಗುತ್ತಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಇಲ್ಲಿ ಲಾಭ ಮತ್ತು ನಷ್ಟದ ಪ್ರಶ್ನೆಯಿಲ್ಲ. ಈ ಪತ್ರಿಕೆಯ ಎರಡೂ ಯೂನಿಟ್‌ಗಳನ್ನು ಒಬ್ಬರೇ ವ್ಯವಸ್ಥಾಪಕರು ನಡೆಸುತ್ತಿದ್ದಾರೆ. ಇದರಲ್ಲಿ ಬೆಂಗಳೂರಿನದನ್ನು ಬೇರೆ ಮಾಡಿ ಬೆಂಗಳೂರಿನಿಂದ ಬರತಕ್ಕಂತಹ ಮುದ್ರಣವನ್ನು ನಿಲ್ಲಿಸಿದ್ದಾರೆ. ಮತ್ತೆ ಅವರು ೨,೨೫,೦೦೦ ರೂಪಾಯಿಗಳು ಇದರಿಂದ ನಷ್ಟವಾಗಂತ್ತಿದೆ, ಇದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ ಎಂಬುದಾಗಿ ಹೇಳಿದ್ದಾರಲ್ಲಾ ಆದು ಅಷ್ಟಾಗಿ ಚೆನ್ನಾಗಿ ಇಲ್ಲ ಎಂದು ನನಗನ್ನಿಸುತ್ತಿದೆ. ಇದು ಒಬ್ಬರಿಗೆ ಸೇರಿರ ತಕ್ಕಂತಹ ವಹಿವಾಟು, ಇದರಲ್ಲಿ ಲಾಭ ಮತ್ತು ನಷ್ಟದ ಪ್ರಶ್ನೆಯಿಲ್ಲ. ಈ ಪತ್ರಿಕೆಗೆ ಸೇರಿರತಕ್ಕಂತಹ ಎಲ್ಲ ವಿಭಾಗಗಳನ್ನು ಒಂದುಗೂಡಿಸಿ ಲಾಭ ನಷ್ಟವನ್ನು ಕೊನೆಗೆ ತೆಗೆದುಕೊಂಡು ಪರಿಶೀಲನೆ ಮಾಡೋಣ. ಇದರಲ್ಲಿ ನಷ್ಟವಾಗುತ್ತಿಲ್ಲ ಎಂಬುದಾಗಿ ಪತ್ರಿಕೋದ್ಯಮಿಗಳು ಹೇಳುತ್ತಿದ್ದಾರೆ. ಇದರಲ್ಲಿ ಅನೇಕ ಏರುಪೇರುಗಳಿವೆ ಎಂಬುದಾಗಿ ನನಗೆ ತಿಳಿದು ಬಂದಿದೆ. ಈಗ ಆದನ್ನೆಲ್ಲಾ ಹೇಳುವುದಕ್ಕೆ ಕಾರಣ ಇಲ್ಲದೇ ಹೋದರೂ, ಬೇರೆಯವರು ಇದಕ್ಕೆ ಕಾರಣಕರ್ತರಾಗಿ ಇಷ್ಟೆಲ್ಲಾ ಆಗತಕ್ಕಂತಹ ಪರಿಸ್ಥಿತಿಗೆ ಬಂದಿದೆ ಎಂಬುದಾಗಿ ಗೊತ್ತಾಗಿದೆ. ಲಾಭ-ನಷ್ಟವನ್ನು ನಿಧಾನವಾಗಿ ಪರಿಶೀಲನೆ ಮಾಡಿ ಅದಕ್ಕೆ ಒಂದು ದಾರಿಯನ್ನು ಕಂಡುಹಿಡಿಯುವುದಕ್ಕೆ ಅವಕಾಶ ಇದೆ ಎನ್ನತಕ್ಕಂತಹ ಮಾತನ್ನು ಅವರೂ ಒಪ್ಪಿಕೊಳ್ಳುತ್ತಾರೆ, ಈಗಿನ ವ್ಯವಸ್ಥಾಪಕರೂ ಒಪ್ಪಿಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಮೂರನೆಯದಾಗಿ ಕಾನೂನಿನ ಒಗ್ಗೆ ವಿಚಾರ ಮಾಡಿದ್ದೇನೆ. ಮತ್ತು ಇದರ ಬಗ್ಗೆ ನಾನು ಸಂಬಂಧ ಪಟ್ಟವರಲ್ಲಿ ಪ್ರಸ್ತಾಪ ಕೂಡ ಮಾಡಿದ್ದೇನೆ. ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದಿರುವ ಹಾಗೆ ಕಾಣುತ್ತದೆ. ಧಾರವಾಡ ಡಿಸ್ಟ್ರಿಕ್ ಜಡ್ಜ್ ಕೋರ್ಟಿನಲ್ಲಿ ಇದರ ಬಗ್ಗೆ ಅನೇಕ ಕೇಸುಗಳು ಇವೆ. ಅವು ಗಳಲ್ಲಿ ಈ ಒಂದು ಟ್ರಸ್ ಎಂಬುದಾಗಿ ಇರುವುದನ್ನು ತೆಗೆಯಬೇಕು, ಹೊಸ ಟ್ರಸ್ಟ್‌ಗಳನ್ನು ಹಾಕಬೇಕು ಎಂಬುದಕ್ಕೆ ಕಾನೂನಿನಲ್ಲಿ ದಾರಿ ಇದೆ. ಇದು ನಿಧಾನವಾಗಿ ನಡೆದುಕೊಂಡು ಹೋಗಲಿ. ಈ ವ್ಯವಹಾರ ವನ್ನು ಚಾರಿಟಿ ಕಮೀಷನರ್‌ರವರನ್ನು ರಿಸೀವಿಂಗ್ ಆಫೀಸರನ್ನಾಗಿ ಮಾಡಿ ಈ ಒಂದು ವ್ಯವಸ್ಥೆಯನ್ನು ಅವರಿಗೆ ಒಪ್ಪಿಸುವುದಕ್ಕೆ ಕಾನೂನಿನಲ್ಲಿ ಅಧಿಕಾರ ಇದೆ.

All parties to the litigation are more or less agreeable that the entire management of the newspaper, both at Hubli and at Bangalore may be handed over by agreement ofparties to the Charity Commissioner under the Bombay Trust Act who would be authorised by the order of the Court to run the edition both at Bangalore and Hubli. If that

happens, and the management by the order of the Court, is handed over to the Charity Commissioner and the Charity Commissioner being an agent under the Act of the Government, it would be easy for the Government to get financial assistance from banking institutions and other credit institutions including the government. This is another solution to this problem which can be immediately obtained, say within a matter of days. These are the three suggestions which I would like to make and the foremost of them is, that the government particularly the Hon. Minister must put all his weight and pressure in all seriousness to see that the paper is re-started.

2-30 P.M.

(SRI H. T. KRISHNAPPA, in the Chair)

Then all other questions can be looked into at leisure. if necessary, and the differences if any, can be ironed out. This is the whole issue. I do not apportion blame on anybody. But unfortunately the paper has stopped its publication. My earnest appeal to the Government is that all efforts must be made to see that the publication of this paper restarts from Monday itself.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ):—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟರ ತಕ್ಕಂಥ ಉತ್ತರ ಬಹುತ: ಅವರು ಈ ಕಡೆ ಇದ್ದಿದ್ದರೆ ಈ ರೀತಿ ಉತ್ತರವನ್ನು ಕೊಡುತ್ತಾ ಇರಲಿಲ್ಲ. ಸರ್ಕಾರವನ್ನು ನಾವು ಕೇಳುತ್ತಾ ಇರುವುದು, ಇದು ಜರೂರಾದ ವಿಷಯ ಆಗಿದ್ದರೂ, ಕೂಡ ಇಲ್ಲಿಯ ವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಅವರು ಹೇಳುತ್ತಾ ಇರುವುದು, ಈ ವಿಷಯ ಅಸಿಸ್ಟೆಂಟ್ ಲೇಬರ್ ಕಮಿಷನರ್ ಮುಂದೆ ರೀ ಕನ್ಸಿಲಿಯೇಷನ್‌ಗೆ ಹೋಗಿದೆ ಎಂದು. ಕನ್ನಡದ ಬಗ್ಗೆ ಚಳುವಳಿ ಮಾಡಿ ಹೋರಾಟ ಮಾಡಿರತಕ್ಕಂಥವರು ಇವತ್ತು ಕನ್ನಡದ ಒಂದು ದೈನಂದಿನ ಪತ್ರಿಕೆ, ೫೦ ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬಂದ ಪತ್ರಿಕೆಗೆ ಇಂತಹ ದುರ್ಗತಿ ಬಂದಾಗ ಅಕರ ಬಗ್ಗೆ ತಕ್ಷಣ ಏನೂ ಕ್ರಮ ತೆಗೆದುಕೊಳ್ಳದೆ ಇರತಕ್ಕಂಥಾದ್ದು ಬಹಳ ದುರದೃಷ್ಟಕರ. ಅದು ಅಲ್ಲದೆ ಏಕಾಏಕಿ ಐದೂರು ನೂರು ನೌಕರರು ಕೆಲಸ ಮಾಡಲಕ್ಕಂಥ ಒಂದು ಸಂಸ್ಥೆ ಯಾವ ರೀತಿ ಮುನ್ಸೂಚನೆ ಇಲ್ಲದೆ ಒಂದನೇ ತಾರೀಖಿನ ದಿನ ಮಾಮೂಲಾಗಿ ನೌಕರರು ಕೆಲಸಕ್ಕೆ ಬಂದಾಗ ಅವರ ಮಾಲೀಕರು ಪತ್ರಿಕೆಯನ್ನು ನಿಲ್ಲಿಸಿದ್ದೇವೆ, ಸಂಸ್ಥೆಯನ್ನು ಮುಚ್ಚಿದ್ದೇವೆ, ಎಂದು ಹೊರಗಡೆ ಒಂದು ಬೋರ್ಡನ್ನು ತಗಲು ಹಾಕಿದರೆ ಹೇಗೆ ಅದರಲ್ಲೂ ಇದಕ್ಕೆ ಇಂಡಸ್ಟ್ರಿಯಲ್ ಆಕ್ಟ್, ಲೇಬರ್ ಆಕ್ಟ್ ಇ.ಎಸ್.ಐ. ಮತ್ತು ಪ್ರಾವಿಡೆಂಟ್ ಫಂಡ್ ಆಕ್ಟ್, ಅಪ್ಲೈ ಆಗುವುದಿಲ್ಲವೇ. ನೌಕರರಿಗೆ ಮುನ್ಸೂಚನೆಯಾಗಿ ಒಂದು ನೋಟೀಸನ್ನು ಕೊಡದೆ ಏಕಾ ಏಕಿಯಾಗಿ ಪತ್ರಿಕೆಯನ್ನು ನಿಲ್ಲಿಸಿದೆ ಎಂದರೆ ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದು ಕೊಳ್ಳದೆ ಇರುವುದು ಸರ್ಕಾರಕ್ಕೆ ಅವಮಾನಕರ ಮತ್ತು ಅವಹೇಳನಕರ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಹೋಗಿ ಮಾತನಾಡಿದರೂ ಕೂಡ ನಮ್ಮ ರಾಜ್ಯದಲ್ಲಿ ನೂರಕ್ಕೆ ನೂರು ಎಲ್ಲಾ ವ್ಯವಹಾರವು ಕನ್ನಡದಲ್ಲೇ ನಡೆಯಬೇಕು, ನಡೆಯುತ್ತದೆ ಇನ್ನು ಮುಂದೆ ಎಂದು ಹೇಳುತ್ತಾ ಇದ್ದಾರೆ. ಇಂತಹ ಸಂದರ್ಭದಲ್ಲಿ ಒಂದು ಕನ್ನಡ ದೈನಂದಿನ ಪತ್ರಿಕೆಯನ್ನು ನಿಲ್ಲಿಸಿ ಅದರ ನೌಕರರು ಒಂದು ತಿಂಗಳಿಂದ ಬೀದಿ ಪಾಲಾಗಿದ್ದರೂ ಕೂಡ, ಅವರ ಬಗ್ಗೆ ಏನು ಮಾಡಬೇಕು ಎಂದು ಹೇಳದೆ ಇರುವುದು ಬಹಳ ವಿಷಾದಕರ ಸಂಗತಿ. ಆ ನೌಕರರಿಗೆ ತಾತ್ಕಾಲಿಕವಾಗಿ ಯಾವುದಾದರೂ ಪರಿಹಾರ ಕೊಡಿಸುತ್ತಾರೋ ಇಲ್ಲವೊ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಅವರು ವಿಧಾನಸೌದದ ಮುಂದೆ ಉಪವಾಸ ಕೂತಿದ್ದಾರೆ. ಇದನ್ನು ತಾವು ಬೇಕಾದರೆ ಸಿಕ್ ಇಂಡಸ್ಟ್ರಿ ಎಂದು ತೀರ್ಮಾನಿಸಿ ಅವರಿಗೆ ತಕ್ಷಣದಲ್ಲಿ ಸಂಬಳ ಕೊಡುವರನ್ನಾದ್ದಾನಾದರೂ ಮಾಡಿ. ಬಿದೆ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಮೈಸೂರು

ಎಲೇಜ್ರಿಕಲ್ ಇಂಡಸ್ಟ್ರಿಯಸ್ ನೌಕರರಿಗೆ ತೊಂದರೆಯಾದಾಗ ಅವರು ಪರಿಹಾರವನ್ನು ಕೊಡಿಸಿಕೊಟ್ಟರು. ಜೊತೆಗೆ ಏನು ನೌಕರರು ಇದ್ದಾರೆ ಅವರ ಇಎಸ್‌ಐ ಮತ್ತು ಪ್ರಾವಿಡೆಂಟ್ ಫಂಡ್ ಕಾಂಟ್ರಿಬ್ಯೂಷನ್ ಏನಾಗಿದೆ ಮತ್ತೆ ನಿಮ್ಮ ಲೇಬರ್ ಕಮಿಷನರ್ ಮತ್ತು ಅವರ ಪರಿವಾರದವರು ಏನು ಮಾಡುತ್ತಿದ್ದಾರೆ ಈ ಮ್ಯಾನೇಜ್‌ಮೆಂಟ್‌ನವರು ನಷ್ಟವಾಗಿದೆ ಎಂದು ಹೇಳಿದ ಮಾತ್ರಕ್ಕೆ ಸರ್ಕಾರ ಕಣ್ಣುಮುಚ್ಚಿ ಕೊಂಡು ಕೂಳಿತಿದೆಯೇ ತಾವು ಇದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಬೇಕು. ತಮಗೆ ಮತ್ತು ತಮ್ಮ, ಸರ್ಕಾರಕ್ಕೆ ತಾಕತ್ ಇದ್ದರೆ ಇದನ್ನು ಕೂಡಲೇ ಸಿಕ್ ಇಂಡಸ್ಟ್ರೀಸ್ ಎಂದು ಡಿಕ್ಲೇರ್ ಮಾಡಿ. ಇದ್ಕೆ ಅಕ್ರಮ ಲಾಕ್‌ಔಟ್ ಎಂದು ಡಿಕ್ಲೇರ್ ಮಾಡಿಲ್ಲ ಏಕೆ ಎಂದು ತಮ್ಮಲ್ಲಿ ಕೇಳುತ್ತೇನೆ. ಇನ್ನೂ ಮೂರು ಯದು ಇದು ಬಹಳ ದುರದೃಷ್ಟಕರ ಅಲ್ಲಿ ಒಂದು ಟ್ರಸ್ಟ್ ಇದೆ, ಅದು ಬೀಚ್ ಆಫ್ ಟ್ರಸ್ಟ್ ಮಾಡಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ಎ. ಲಕ್ಷ್ಮಿಸಾಗರ್:(ಚಿಕ್ಕಪೇಟೆ)—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕೋರ್ಟಿನಲ್ಲಿ ದಾವೆ ಇದೆ. ಆದ್ದರಿಂದ ಸರ್ಕಾರ ಕೋರ್ಟಿನ ಮುಂದೆ ಇರುವ ವಿಷಯದ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ? ಅದರ ಬಗ್ಗೆ ಏನೂ ಹೇಳಲಿಕ್ಕೂ ಸಾಧ್ಯವಾಗುವುದಿಲ್ಲ

ವೈಸ್ ಛೇರ್‌ಮನ್:—ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆ ಮೇಲೆ ಸ್ಪಷ್ಟೀಕರಣ ಕೇಳ ಬೇಕೆ ಹೊರತು ವಿಷಯವನ್ನು ಲಂಬಿಸುವುದಕ್ಕಾಗಲಿ ಅಥವಾ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಆಗಲಿ ಈ ಸಂದರ್ಭದಲ್ಲಿ ಸಾಧ್ಯವಿಲ್ಲ. ನಿಯಮದ ಪ್ರಕಾರ ಇದಕ್ಕೆ ಅವಕಾಶವಿಲ್ಲ. ಇದನ್ನು ಬೇರೆ ಸಂದರ್ಭ ದಲ್ಲಿ ಮಾತನಾಡಿ ದಯಮಾಡಿ.

ಶ್ರೀ ಪಿ. ರಾಮದೇವ್:—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಮೊದಲು ಅವರಿಗೆ ಸಂಬಳ ಕೊಡಿ ಸುವುದಕ್ಕೆ ಸಾಧ್ಯವಿದೆಯೇ? ಇವರಿಗೆ ಸಂಬಳ ಕೊಡಿಸಲು ಮತ್ತು ಪರಿಹಾರ ಕೊಡಲು ಸರ್ಕಾರಕ್ಕೆ ಬೇಕಾದಷ್ಟು ಕಾನೂನುಗಳು ಇವೆ. ಇನ್ನು ಎರಡನೆಯದಾಗಿ ಕನ್ನಡವನ್ನು ನೂರಕ್ಕೆ ನೂರು ಆಡಳಿತ ಭಾಷೆ ಮಾಡಬೇಕೆಂದಿರುವಾಗ ಇಂತಹ ಲೀಡಿಂಗ್ ದಿನಪತ್ರಿಕೆಯನ್ನು ಮುಚ್ಚಿರುವಾಗ ಏನು ಕ್ರಮ ತೆಗೆದ ಕೊಳ್ಳುತ್ತಾರೆ, ಕ್ರಮ ತೆಗೆದುಕೊಳ್ಳುವುದಾದರೆ ತಕ್ಷಣ ತೆಗೆದುಕೊಳ್ಳುವುದಕ್ಕೆ ಇವರಿಗೆ ತೊಂದರೆಯೇನು? ಇದಕ್ಕೆ ಒಂದು ಟ್ರಸ್ಟ್ ಇತ್ತು ಅದು ಒಬ್ಬರಿಂದ ಒಬ್ಬರಿಗೆ ಬದಲಾಯಿಸಿಕೊಂಡು ಹೋಗಿ ಈ ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ಇದು ಯಾವ ರೀತಿಯಿಂದ ನಷ್ಟವಾಗಿದೆ ಎಂದು ಕಂಡು ಹಿಡಿಯುವುದಕ್ಕೆ ಸಾಧ್ಯವಿಲ್ಲವೆ

ವೈಸ್ ಛೇರ್‌ಮನ್:—ಈಗ ಭಾಷಣ ಮಾಡುತ್ತಾ ಕೂಳಿತುಕೊಳ್ಳುವುದಕ್ಕೆ ಸಮಯಾವಕಾಶ ಕಡಿಮೆ. ಆದ್ದರಿಂದ ಮೊದಲು ನೋಟೀಸ್ ಕೊಟ್ಟವರಿಗೆ ಮೊದಲು ಅವಕಾಶ ಕೊಟ್ಟು ಆಮೇಲೆ ಬೇರೆ ಯವರಿಗೆ ನೋಡೋಣ.

ಶ್ರೀ ಎಂ. ವಿ. ರಾಜಶೇಖರನ್:—ಇದು ಬಹಳ ಮಹತ್ವದ ವಿಚಾರ ಇರುವುದರಿಂದ ಬೇರೆಯವ ರಿಗೂ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ದಯಮಾಡಿ ನೋಟೀಸ್ ಕೊಡದೇ ಇರುವವರಿಗೂ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವೈಸ್ ಚೇರ್‌ಮನ್:—ಇದಕ್ಕೆ ಎಷ್ಟು ಮಹತ್ವ ಕೊಡಬೇಕೋ, ಎಷ್ಟು ಸಾಧ್ಯವೋ ಕೊಡೋಣ.

ಶ್ರೀ ಎಚ್. ಡಿ. ದೇವೇಗೌಡ,—ಇದರ ಬಗ್ಗೆ ಇರತಕ್ಕ ನಿಯಮವನ್ನು ಸಡಿಲ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಸಂಯುಕ್ತ ಕರ್ನಾಟಕ ಪತ್ರಿಕೆಯ ಮೇಲೆ ಈ ಸರ್ಕಾರಕ್ಕೆ ಧೋರಣೆ ಬದಲಾವಣೆ ಯಾಗಿದೆ ಪೂರ್ವದಲ್ಲಿ ಈ ಪತ್ರಿಕೆಯ ಧೋರಣೆ ಯಾವರೀತಿ ಇತ್ತು ಎಂಬುದು ತಮಗೆ ಗೊತ್ತಿದೆ. ಈ ಪತ್ರಿಕೆಯ ಧೋರಣೆಯ ಮೇಲೆ ಆಗ್ರಹ ಇದ್ದರೂ ಕೂಡ ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿವರ್ಗದ ವರಿಗೆ ಅನಾಹುತ ಮಾಡುವುದು ಬೇಡ. ಇದರ ಬಗ್ಗೆ ಸ್ವಲ್ಪ ನಿಯಮವನ್ನು ಸಡಿಲಗೊಳಿಸಬೇಕು. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ ಹಿಂದಿನ ೪೭ ವರ್ಷದ ಚರಿತ್ರೆ ಇದಕ್ಕೆ ಇದೆ. ಇದು ಬೆಂಗಳೂರಿನಲ್ಲಿ ೨೦ ವರ್ಷಗಳ ಕೆಳಗೆ ಲೋಕ ಶಿಕ್ಷಣ ಟ್ರಸ್ಟ್ ಆಡಳಿತದಲ್ಲಿ ಪ್ರಾರಂಭವಾಯಿತು. ಆ ಮೇಲೆ ೧೯೭೪ನೇ ಇಸವಿಯಲ್ಲಿ ಮತ್ತೊಂದು ಸಾರಿ ಕೈ ಬದಲಾವಣೆಯಾಗಿ ಆಗಿನ ಸರ್ಕಾರದಲ್ಲಿ ಇದ್ದ ಒಬ್ಬರು ಪ್ರಭಾವಿ ವ್ಯಕ್ತಿಗಳು ಇದನ್ನು ನಡೆಸುವುದಕ್ಕೆ ತೆಗೆದುಕೊಂಡರು. ಮತ್ತೆ ೭೭ನೇ ಇಸವಿಯಲ್ಲಿ ಈ

ಸಂಯುಕ್ತ ಕರ್ನಾಟಕ ಪತ್ರಿಕೆಯು ಮಾಲೀಕತ್ವ ಬದಲಾವಣೆಯಾಯಿತು. ಇದು ಇಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಇದು ಎರಡು ಸಾರಿ ಕೈ ಬದಲಾಣಿಯಾಗಿ ಹಿಂದಿನ ಸರ್ಕಾರ ಒಂದಲ್ಲ ಒಂದು ರೀತಿಯಲ್ಲಿ ಮಧ್ಯೆ ಪ್ರವೇಶ ಮಾಡಿ ಈ ಪತ್ರಿಕೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದೆ.

ಅಧ್ಯಕ್ಷರು.—ಇದರ ಆವ್ಯವಸ್ಥೆಗೆ ಕಾರಣವೇನೆಂಬುದನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಇದ್ದರೆ ತಿಳಿಸಬಹುದು. ಆದರೆ ಈ ಸಂದರ್ಭದಲ್ಲಿ ಅದರ ಚರಿತ್ರೆಯನ್ನೆಲ್ಲಾ ಹೇಳುವುದು ಅನಾವಶ್ಯಕ.

ಶ್ರೀ ಎಂ ಚಂದ್ರಶೇಖರ್. ಈ ಸರ್ಕಾರ ಇದರ ಜೊಣೆಗಾರಿಕೆಯನ್ನು ತೆಗೆದುಕೊಂಡು ಇದರ ಬಗ್ಗೆ ಇರತಕ್ಕ ಎಲ್ಲಾ ವಿಚಾರಗಳನ್ನೂ ಬಿದಿಗೊತ್ತಿ ಈ ಪತ್ರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ದವರು ಕ್ರಮ ತೆಗೆದುಕೊಳ್ಳಬೇಕು. ಈ ಪತ್ರಿಕಾ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ೨೦೦ ಜನ ಕೆಲಸಗಾರರು ಇವ್ಹೊತ್ತು ಕೆಲಸ ಇಲ್ಲದೆ ಇದ್ದಾರೆ. ಇವರ ಸಂಬಳದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಎಚ್. ಗಂಗಾಧರ್.—ಮಾನ್ಯ ಅಧ್ಯಕ್ಷರೇ ಈ ಸಮಸ್ಯೆ ಬಹಳ ಗಹನವಾದುದು. ಇದಕ್ಕೆ ನಮ್ಮ ಮಾನ್ಯ ಕಾರ್ಮಿಕ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ವಿಚಾರ ಒಂದು ಮಹತ್ವದ ವಿಚಾರವಾಗಿದೆ. ಲೇಬರರ್ ಪ್ರಾಬ್ಲಮ್ ಬಗ್ಗೆ ಉತ್ತರ ಕೊಟ್ಟಿದೆ ಎಂದು ಹೇಳಿದ್ದಾರೆ. ಇವರು ಕೊಟ್ಟಿರತಕ್ಕ ಉತ್ತರದಲ್ಲಿ ಈ ರೀತಿ ಹೇಳಿದ್ದಾರೆ. The reasons given for the closure of the Bangalore Unit is due to "unavoidable circumstances beyond their control". ಎಂದು ಹೇಳಿದ್ದಾರೆ. ಇದು ವಿವರಣೆ ಕೊಡುವ ರೀತಿಯೇ ಎಂದು ನನಗೆ ಅನಿಸುತ್ತದೆ.

ಎರಡನೆಯದು ಈ ಪತ್ರಿಕೆಯ ಆರಂಭದ ಬಗ್ಗೆ ಹೇಳಿದ್ದಾರೆ. ಇದು ಸಾರ್ವಜನಿಕರು ಕೊಟ್ಟ ಹಣದಿಂದ ಜೊತೆಗೆ ಲೋಕ ಶಿಕ್ಷಣ ಟ್ರಸ್ಟ್ ಉಳಿದ ಬಂಡವಾಳವನ್ನು ದಾಕಿ ಈ ಪತ್ರಿಕೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಆ ಮೇಲೆ ಇದನ್ನು ಜಯ ಕರ್ನಾಟಕದವರಿಗೆ ಮಾರಿದರು. ಹಾಗಾದರೆ ಈ ಪತ್ರಿಕೆಗೆ ಲೋಕ ಶಿಕ್ಷಣ ಟ್ರಸ್ಟ್‌ನವರು ಹಾಕಿದಂತಹ ಫಂಡ್ ಏನಾಯಿತು ? ಏತಕ್ಕೆಂದರೆ ಇದು ಎರಡನೇ ಗೋಪಾಲರಾವ್ ಬ್ಯಾಂಕ್ ಪ್ರಕರಣ. ಇದಕ್ಕೆ ಸರ್ಕಾರದಿಂದ ಸರಿಯಾದ ಉತ್ತರ ಬರಲಿಲ್ಲ. ಬೆಂಗಳೂರಿನಲ್ಲಿರತಕ್ಕ ಪತ್ರಿಕೆಯ ವಿಭಾಗವನ್ನು ಬಿಂದೆ ಅರ್ಥಸಚಿವನಾಗಿದ್ದವರು ಕೊಂಡು ಕೊಂಡು ನಡೆಸುತ್ತಿದ್ದರು. ಆಮೇಲೆ ಒಬ್ಬರು ಕೈಗಾರಿಕೋದ್ಯಮಿಗಳು ಅದನ್ನು ತೆಗೆದುಕೊಂಡು ನಡೆಸುತ್ತಿದ್ದರು. ಈಗ ಪತ್ರಿಕೆಯನ್ನು ನಡೆಸುತ್ತಾ ಇರತಕ್ಕ ಕಟ್ಟಡ ಏನಿದೆ ಅದಕ್ಕೆ ಪತ್ರಿಕೆಯ ಮಾಲೀಕರು ಲೋಕ ಶಿಕ್ಷಣ ಟ್ರಸ್ಟಿಗೆ ಬಾಡಿಗೆ ಕೊಡಬೇಕು. ಅಂದರೆ ಅವರು ಒಂದು ತಿಂಗಳಿಗೆ ಆ ಕಟ್ಟಡಕ್ಕೆ ಲೋಕ ಶಿಕ್ಷಣ ಟ್ರಸ್ಟಿನವರಿಗೆ ೫೦ ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಡಬೇಕು. ಆ ಪತ್ರಿಕೆಗೆ ಸೇರಿದ ಮೇಷನರಿ ವಗೈರೆಗಳನ್ನು ಹೊರಗಡೆ ತರಿಸದೇ ಹೋದರೆ, ಕಣ್ಣು ಮುಚ್ಚಿಕೊಂಡು ಅಗ್ರಿಮೆಂಟಿಗೆ ರುಜು ಹಾಕುತ್ತಾ ಬಂದರೆ ವಿನಾಕಾರಣ ಆ ಕಟ್ಟಡಕ್ಕೆ ಒಂದು ತಿಂಗಳಿಗೆ ೫೦ ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆದರಿಂದ ಈ ಪತ್ರಿಕೆಗೆ ನಷ್ಟವಾಗುತ್ತದೆ. ಈ ವಿಷಯಗಳನ್ನು ಅವರು ಗಮನಕ್ಕೆ ತೆಗೆದುಕೊಂಡೇ ಇಲ್ಲ. ಈಗ ಈ ಪತ್ರಿಕೆಯನ್ನು ನಡೆಸುವುದಾದರೆ ಲೋಕ ಶಿಕ್ಷಣ ಟ್ರಸ್ಟಿನವರಿಗೆ ಕಟ್ಟಡದ ಬಾಡಿಗೆಗಾಗಿ ಕೊಡತಕ್ಕ ೫೦ ಸಾವಿರ ರೂಪಾಯಿಗಳನ್ನು ನಿಲ್ಲಿಸಿ ಪತ್ರಿಕೆಗೆ ಲಾಸ್ ಆಗುವುದನ್ನು ತಡೆಗಟ್ಟಿ ಅಲ್ಲಿ ಕೆಲಸ ಮಾಡತಕ್ಕ ೩೦೦ ಜನ ನೌಕರರು ತಮ್ಮ ಜೀವನವನ್ನು ನಡೆಸುವುದಕ್ಕೆ ಸಹಾಯ ಮಾಡಬಹುದು. ಜೊತೆಗೆ ಇಡೀ ರಾಜ್ಯದಲ್ಲಿ ಈ ಪತ್ರಿಕೆಯನ್ನು ಮಾರಾಟ ಮಾಡತಕ್ಕ ೮೦೦–೧,೦೦೦ ಜನ ಅವರೂ ಕೂಡ ತೊಂದರೆಗೆ ಈಡಾಗಿದ್ದಾರೆ. ಯಾವ ಕಾರಣಕ್ಕಾಗಿ ಈ ಪತ್ರಿಕೆಯನ್ನು ನಿಲ್ಲಿಸಿದ್ದಾರೆ ಏನ್ನುವುದಕ್ಕೆ ಕಾರಣ ಹೇಳಿದ್ದಾರೆ. ಅದು ಈ ರೀತಿ ಇದೆ. "unavoidable circumstances beyond their control" ಇದನ್ನು ವಿಚಾರಣೆ ಮಾಡಿದ್ದೀರಾ ? ಕನ್‌ಸಲ್ಟೇಷನ್ ನಡೆಯುತ್ತಿದೆ ಎಂದು ಹೇಳಿದ್ದಾರೆ. ಪಾಸ್ತವವಾಗಿ ಇದನ್ನು ವಿಚಾರಣೆ ಮಾಡಿದ್ದರೆ ತಕ್ಷಣ ಈ ಪತ್ರಿಕೆಯನ್ನು ಪ್ರಾರಂಭ ಮಾಡಬಹುದಾಗಿತ್ತು. ಸರ್ಕಾರ ಇದರಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿದೆ. ಆ ಕಟ್ಟಡಕ್ಕೆ ಬಾಡಿಗೆ ಕೊಡುವುದನ್ನು ನಿಲ್ಲಿಸಿ ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಳ

ಕೊಡುವುದಕ್ಕೆ ಪ್ರಯತ್ನ ಮಾಡಿದರೆ ಲೋಕ ಶಿಕ್ಷಣ ಟ್ರಸ್ಟಿಗೆ ಯಾವ ನಷ್ಟವೂ ಆಗುವುದಿಲ್ಲ. ಆದ್ದರಿಂದ ಸರ್ಕಾರ ಶೀಘ್ರವಾಗಿ ಮಧ್ಯ ಪ್ರವೇಶ ಮಾಡಿ ಪತ್ರಿಕೆಯನ್ನು ಶೀಘ್ರವಾಗಿ ಪ್ರಾರಂಭ ಮಾಡಿ ಈಗ ಆ ಪತ್ರಿಕೆಯ ಕಾರ್ಮಿಕರು ಏನು ಮುಷ್ಕರ ಹೂಡಿದ್ದಾರೆ ಅವರು ಅದನ್ನು ನಿಲ್ಲಿಸಿ ಕೆಲಸಕ್ಕೆ ಹೋಗುವುದಕ್ಕೆ ಬರುತ್ತದೆ, ಇದನ್ನು ವಿಚಾರಣೆ ಮಾಡುವುದಕ್ಕೆ ಗಮನ ಕೊಡುತ್ತೀರಾ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಪೂರ್ಣ ವಿವರಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† SRI C. M. ARUMUGHAM (K.G.F).—Sir, I will not go into the merits of the case. I would only appeal to the Hon. Minister Sri Ibrahim to take all steps to persuade the management to start the paper immediately. As everybody knows this paper was established 50 years ago and in Bangalore its standing is for 23 years. The circulation of both the units is 75,000 *i.e.* so many subscribers are there. For the Bangalore unit alone the circulation is 25,000 and to gain this circulation they have taken 23 long years. It has been stopped from 31st January and the readers may change the newspapers and go to some other newspaper. So, if you start the paper late, it may not be useful to the management, the journalists and others. As Sri Gangadhar pointed out, apart from 210 employees there are 400 agents who are selling this newspaper. Apart from them there are hawkers also. Therefore I appeal to the Government that they must come forward and take immediate steps to solve this problem. To encourage Kannada films they give loans and subsidies. As this is a Kannada journal, the Hon. Minister must come forward to persuade the management to start it immediately. I do not know how he is going to do it. My hon. Friend Sri Lakshmisagar referred to the losses suffered by this paper. I may mention in this connection that newspapers are run not by selling it for 25 or 30 paise per paper but are run because of the advertisements given to them. I do not want to go into those details at this stage. Now, the question is to provide employment to these 210 journalists and 400 agents and provide newspapers for 70,000 subscribers. I therefore appeal to Sri Ibrahim who is a very strong man that he must take some interest and talk to the Chief Minister and take a decision immediateiy. If we delay settling this matter by a month or so. by that time you may not find any readers for it. The journalists are not getting their salary for this month. Try to help them from the Government side by giving their salary. If it is necessary, send for the management, talk to them and if necessary, help them to start the Newspaper immediately. Just as the previous Government was patronising the paper. Please help them by way of giving advertisements in order to provide employment to the journalists and see that the Kannada journal which has been there for the last 25 years in Bangalor is continued. When they are running the Newspaper at Hubli, how can they stop it in Bangalore, is another point which the Government

must consider. I appeal to the Hon. Minister for Labour Sri Ibrahim to persuade the management to start the Newspaper immediately. Thank you very much.

SRI QAMARUL ISLAM (Gulbarga).—Sir, After reading the statement of the Hon. Minister regarding this matter, I feel that sincere efforts have not been made. A very important point to be considered is, if a paper is stopped immediately its readers will forget the paper. As my hon. friend Sri Arumugham rightly pointed out there are about twenty thousand subscribers. If this Newspaper is not started immediately, the readers will switch over to some other Newspaper. So, the very important point is about the readers taking to other paper. The readers want to read a well established and leading Kannada daily which has been closed all of a sudden. Apart from this, there are the journalists and workers who are suffering on account of the closure of the paper. So, the Government should make serious efforts to see that the Newspaper is started immediately. The conciliation machinery should use its good offices and try to start the Newspaper immediately. The conciliation machinery has already held several meetings. It can continue its further meetings. The most important thing is that the Government should take immediate steps to see that the paper is started immediately.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಹೆಚ್ಚಾಗಿದೆಯೇ ಹೊರತು ಪರಿಹಾರ ಕಾಣುತ್ತಿಲ್ಲ. ಈ ವಿಚಾರವಾಗಿ ಹಿಂದೆಯೂ ಕೂಡ ನಾನು ಪ್ರಸ್ತಾಪ ಮಾಡಿದ್ದೆ. ನನಗೆ ವ್ಯಥೆಯಾಗುತ್ತದೆ, ಏಕೆಂದರೆ, ಕನ್ನಡಿಗರು ಪ್ರಯತ್ನಮಾಡಿ, ಕನ್ನಡಿಗರ ಒಡೆತನದಲ್ಲಿರತಕ್ಕ ಪತ್ರಿಕೆಯೊಂದರೆ ಇಡೊಂದೆ. ಬೇರೆ ರಾಜ್ಯದ ನಾಯಕರುಗಳು ಇಲ್ಲಿಗೆ ಬಂದು ಕೆಲವು ಪತ್ರಿಕೆಗಳನ್ನು ಪ್ರಾರಂಭ ಮಾಡಿದ್ದಾರೆ, ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕರ್ನಾಟಕದಲ್ಲಿ ಕನ್ನಡಿಗರೇ ಪ್ರಾರಂಭ ಮಾಡಿದಂಥ ಮತ್ತು ಕಳೆದ ೫೦ ವರ್ಷಗಳಿಂದಲೂ ನಡೆದುಕೊಂಡು ಬಂದಂಥ ಪತ್ರಿಕೆ ಇದು. ಸರಕಾರಕ್ಕೆ ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡಿದ್ದರೆ ಈ ಪತ್ರಿಕೆ ನಿಂತು ಹೋಗತಕ್ಕ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಈ ಪತ್ರಿಕೆಗೆ ಲಕ್ಷಾಂತರ ರೂಪಾಯಿಗಳ ಆಸ್ತಿ ಇದೆ, ಬೇಕಾದಷ್ಟು ಗುಡ್‌ವಿಲ್ ಇದೆ, ಆದರೂ ಇವತ್ತು ಈ ಪತ್ರಿಕೆ ನಿಂತುಹೋಗಿದೆ. ಇದು ನಿಂತು ಹೋಗಿರುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕಾದರೆ ಕಾನೂನಿನ ತೊಡಕುಗಳು ಇರಬಹುದು, ಆರ್ಥಿಕ ಸಮಸ್ಯೆ ಇರಬಹುದು, ಆವುಗಳು ಏನೇ ಇದ್ದರೂ ಸಹ ಮಾಡತಕ್ಕ ಕಾರ್ಯ ಎಂದರೆ ಮ್ಯಾನೇಜ್‌ಮೆಂಟಿನವರು ಈ ಪತ್ರಿಕೆಯನ್ನು ಕೂಡಲೇ ಹೊರಡಿಸುವುದಕ್ಕೆ ಒಪ್ಪಬೇಕು. ಒಪ್ಪದೆ ಹೋದರೆ, ಟ್ರಸ್ಟ್ ಆಕ್ಟ್ ಪ್ರಕಾರ ಇದಕ್ಕೆ ಒಬ್ಬ ಚಾರಿಟಿ ಕಮಿಷನರ್ ಅಥವಾ ರಿಸೀವರ್ ಅನ್ನು ನೇಮಿಸಿ ಸರ್ಕಾರದ ಆಡಳಿತಕ್ಕೆ ಇದನ್ನು ತೆಗೆದುಕೊಳ್ಳಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಮ್ಯಾನೇಜ್‌ಮೆಂಟಿನವರ ಲೆಕ್ಕಪತ್ರವನ್ನು ನೋಡಿದರೆ ಲಕ್ಷಾಂತರ ರೂಪಾಯಿಗಳ ಲಾಸನ್ನು ಇದರಲ್ಲಿ ತೋರಿಸುತ್ತಿದ್ದಾರೆ. ಇದನ್ನು ತುಂಬತಕ್ಕದ್ದು ಹೇಗೆ ? ಬಹಳ ವಿಚಿತ್ರವಾಗಿದೆ, ಒಂದು ಕೋಟಿ ರೂಪಾಯಿಗಳ ಬೆಲೆ ಬಾಳುವ ಸ್ಥಾವರ ಆಸ್ತಿಗಳು ಇರುವ ಈ ಪತ್ರಿಕೆಯನ್ನು ಬೇರೆಯವರಿಗೆ ಒಪ್ಪಿಸಿದ್ದಾರೆ. ಇದರ ಸದಸ್ಯರು ಮಾಡಿದಂಥ ದ್ರೋಹ, ಮ್ಯಾನೇಜ್‌ಮೆಂಟಿನಲ್ಲಿ ಮಾಡಿದಂಥ ನಷ್ಟ, ಇವೆಲ್ಲವನ್ನೂ ನಾವು ಇಲ್ಲಿ ಚರ್ಚೆ ಮಾಡುವುದು ಅನಾವಶ್ಯಕ. ಮೊದಲು ಈ ಪತ್ರಿಕೆಯನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರದವರು ಇದರಲ್ಲಿ ಹಸ್ತಕ್ಷೇಪ ಮಾಡಬೇಕು. ಕಾನೂನು ಪ್ರಕಾರವೇ ತಪ್ಪು ಆಡಳಿತಕ್ಕೆ ತೆಗೆದುಕೊಳ್ಳಬೇಕು. ಇದಕ್ಕೆ ಅವಶ್ಯಕವಾದ ಹಣಕಾಸಿನ ವ್ಯವಸ್ಥೆಯನ್ನು ಮಾಡಿ ಪತ್ರಿಕೆಯನ್ನು ಪ್ರಾರಂಭ ಮಾಡಬೇಕು. ಕರ್ನಾಟಕ

ಸರ್ಕಾರ ಕನ್ನಡದ ಅಭಿಮಾನದಿಂದ ಈ ಕೆಲಸ ಮಾಡತಕ್ಕದ್ದು ಸೂಕ್ತ, ಈ ದೃಷ್ಟಿಯಿಂದ ಸರ್ಕಾರದವರು ಕೂಡಲೇ ಕ್ರಮಕ್ಕೈಗೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ತೀವ್ರವಾದ ಕ್ರಮ ತೆಗೆದುಕೊಂಡು ಸಂಬಂಧಪಟ್ಟವರನ್ನು ಕರೆದು ಆಲೋಚನೆ ಮಾಡಬೇಕು ಅವರು ಒಪ್ಪದೇಹೋದರೆ, ನೇರವಾಗಿ ಸರ್ಕಾರವೇ ಹಸ್ತಕ್ಷೇಪಮಾಡಿ ಕಾನೂನು ಪ್ರಕಾರವೇ ತಮ್ಮ ಆಡಳಿತಕ್ಕೆ ತೆಗೆದುಕೊಳ್ಳಬೇಕು ಮತ್ತು ಪತ್ರಿಕೆಯನ್ನು ಪ್ರಾರಂಭ ಮಾಡಬೇಕು ಎನ್ನುವ ಸಲಹೆ ಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚಿನ ವಿಚಾರಗಳನ್ನು ನಾನು ಸಭೆಯಲ್ಲಿ ಹೇಳಲಿಕ್ಕಾಗುವುದಿಲ್ಲ. ಅವಶ್ಯಕ ಬಿದ್ದರೆ ನನ್ನನ್ನು ತಾವು ಕರೆಯುವಂಥ ಸಭೆಗೆ ಕರೆದರೆ ಒಳ್ಳೆಯದು. ನನಗೂ ಈ ಪತ್ರಿಕೆಗೂ ಬಹಳ ಹಿಂದಿನಿಂದಲೂ ಸಂಬಂಧ ಇದೆ. ನಾನೂ ಒಬ್ಬ ಡಿಪಾಸಿಟರ್. ಸುಮಾರು ಜನರು ಬಡ ವಿಧವೆಯರು, ಬಡವರು ಸುಮಾರು ೩೦ ಲಕ್ಷ ರೂಪಾಯಿಗಳನ್ನು ಇದರಲ್ಲಿ ತೊಡಗಿಸಿದ್ದಾರೆ. ಅವರೂ ಸಹ ಇಂದು ಉಪವಾಸ ಮಾಡುತ್ತಿದ್ದಾರೆ. ಸರ್ಕಾರದವರ ಹಸ್ತಕ್ಷೇಪ ಅವಶ್ಯವಾಗಿದೆಯೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಸಭಾಧ್ಯಕ್ಷರು.—ಈಗಾಗಲೇ ಅನೇಕ ವಿಚಾರಗಳನ್ನು ಅನೇಕರು ಹೇಳಿದ್ದಾರೆ, ಆ ವಿಚಾರಗಳಲ್ಲದೆ ಬೇರೆ ವಿಚಾರಗಳನ್ನು ಹೇಳಿದರೆ ಅವುಗಳನ್ನು ಸ್ವಾಗತಿಸುತ್ತೇವೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ (ಸೂರತ್‌ಕಲ್).—ಸರ್ಕಾರದವರು ಇದರಲ್ಲಿ ಇಷ್ಟರವರೆಗೆ ಮಾಡಿರುವುದು ಏನೇನೂ ಸಾಲದು; ಇದು ನನ್ನ ಖಚಿತವಾದ ಅಭಿಪ್ರಾಯ. ಇದರಲ್ಲಿ ಲೇಬರ್ ಪ್ರಾಬ್ಲಮ್ ಮಾತ್ರ ಸರ್ಕಾರದವರು ತೆಗೆದುಕೊಂಡಿದ್ದಾರೆಂದು ಅವರ ಉತ್ತರದಿಂದ ನಮಗೆ ಗೊತ್ತಾಗುತ್ತದೆ. ಇದು ಲೇಬರ್ ಪ್ರಾಬ್ಲಮ್ ಮಾತ್ರವಲ್ಲ, ಅದಕ್ಕಿಂತಲೂ ಸ್ವಲ್ಪ ಹೆಚ್ಚು ಸಮಸ್ಯೆ ಇದೆ. ನಮ್ಮ ರಾಜ್ಯದಲ್ಲಿ ರಾಜ್ಯ ಭಾಷೆಯಲ್ಲಿ ರಾಜ್ಯ ಭಾಷೆಯ ಪತ್ರಿಕೋದ್ಯಮ ಎಷ್ಟರಮಟ್ಟಿಗೆ ಬೆಳೆದಿದೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ನಾವು ನೋಡಬೇಕಾಗುತ್ತದೆ. ಬೇರೆ ರಾಜ್ಯಗಳಲ್ಲಿ ಇದನ್ನು ಹೋಲಿಸಿ ನೋಡಿದರೆ ನಮ್ಮದು ಏನೇನೂ ಸಾಲದು. ಅಂಥ ಸ್ಥಿತಿಯಲ್ಲಿರುವಾಗ ಒಂದು ದೊಡ್ಡ ಪತ್ರಿಕೆ, ಹೆಚ್ಚು ಕಾಲಸೇವೆ ಮಾಡಿದಂಥ ಪತ್ರಿಕೆ, ದೊಡ್ಡ ಹಿನ್ನೆಲೆ, ಚರಿತ್ರೆ ಇರತಕ್ಕ ಪತ್ರಿಕೆ ಇಂದು ನಿಂತುಹೋಗಿದೆ ಎಂದು ಹೇಳುವಾಗ ಕನ್ನಡಿಗರಿಗೆ ಬಹಳ ದುಃಖವಾಗುತ್ತದೆ. ಸರ್ಕಾರದವರು ಇದರಲ್ಲಿ ಲೇಬರ್ ಪ್ರಾಬ್ಲಮ್ ಮಾತ್ರ ಇದೆಯೆಂದು ತಿಳಿದುಕೊಂಡು ಅದನ್ನು ಹಾಗೆ ಡೀಲ್ ಮಾಡಿದ ಹಾಗೆ ಕಾಣುತ್ತದೆ.

ಅವರ ಹೇಳಿಕೆಯನ್ನು ನಾವು ನೋಡಿದಾಗ, ಆಂಡರ್ ಅನ್‌ಅವಾಯ್ಡಬಲ್ ಸರ್ಕಮ್‌ಸ್ಟ್ಯಾನ್ಸಸ್, ಸರ್ಕಮ್‌ಸ್ಟ್ಯಾನ್ಸ್ ಬಿಯಾಂಡ್ ಅವರ್ ಕಂಟ್ರೋಲ್ ಎಂದರೆ, ಸರ್ಕಾರವೇ ಅದನ್ನು ಒಪ್ಪಿಕೊಂಡ ಹಾಗೆ ಕಾಣುತ್ತದೆ. ಇದರಲ್ಲಿ ಕನ್‌ಸಿಲಿಯೇಷನ್ ಇದೆಯೆಂದು ಹೇಳುತ್ತಿದ್ದಾರೆ. ಬಿಯಾಂಡ್ ಅವರ್ ಕಂಟ್ರೋಲ್ ಎಂದು ಒಪ್ಪಿಕೊಂಡ ಮೇಲೆ ಕನ್‌ಸಿಲಿಯೇಷನ್ ಪ್ರಶ್ನೆ ಎಲ್ಲಿ ಬರುತ್ತದೆ? ಕನ್‌ಸಿಲಿಯೇಷನ್ ಆಗತ್ಯವಿಲ್ಲ. ಕನ್‌ಸಿಲಿಯೇಷನ್ ಇರತಕ್ಕದ್ದು ಮ್ಯಾನೇಜ್‌ಮೆಂಟ್ ಮತ್ತು ಕಾರ್ಮಿಕರ ನಡುವೆ. ಆದರೆ ಸರ್ಕಾರದವರು ಡಿಲ್ಲಿ ಡಾಲಿಯಿಂಗ್ ಬಿಸಿನೆಸ್ ಮಾಡುತ್ತಿದ್ದಾರೆ. ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಕನ್ನಡ ಪತ್ರಿಕೆ ಮುಚ್ಚದ ಹಾಗೆ ಮತ್ತು ತಕ್ಷಣ ತೆರೆಯುವ ಹಾಗೆ ತಮ್ಮ ಎಲ್ಲಾ ಇನ್‌ಫ್ಲೂಯನ್ಸ್ ಉಪಯೋಗ ಮಾಡಿ, ತೆರೆಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

೩-೦೦ ಪಿ.ಎಂ.

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ೩ ಪ್ರಶ್ನೆಗಳಿವೆ. ಕಾನೂನಿನ ಚೌಕಟ್ಟಿನಲ್ಲಿ ಸರ್ಕಾರ ಎಷ್ಟರ ಮಟ್ಟಿಗೆ ಕೆಲಸ ಮಾಡಬಹುದೆಂಬ ಕಲ್ಪನೆ ಇಟ್ಟುಕೊಂಡು ನಾವು ಸರ್ಕಾರಕ್ಕೆ ಸಲಹೆ ಕೊಡಬೇಕಾದುದು ನಮ್ಮ ಧರ್ಮ. ಇಲ್ಲಿ ಕಾನೂನಿನ ಪ್ರಶ್ನೆ ಇದೆ. ಹಣಕಾಸಿನ ಪ್ರಶ್ನೆ ಇದೆ. ಮತ್ತು ನಮ್ಮೆಲ್ಲರ ಗಮನವನ್ನು ಸೆಳೆದಿರತಕ್ಕಂಥ ಮಾನವೀಯ ಪ್ರಶ್ನೆ ಇದೆ. ಈ ಪತ್ರಿಕೆ ಮುಚ್ಚಿರುವುದರಿಂದ ೩೦೦ಕ್ಕೂ ಮೇಲ್ಪಟ್ಟು ಪತ್ರಿಕಾಕರ್ತರು ತೊಂದರೆಗೆ ಒಳಗಾಗಿದ್ದಾರೆ. ಇಲ್ಲಿ ತಪ್ಪು ಯಾರದು ಎಂದು ಈಗ ವಿಶ್ಲೇಷಣೆ ಮಾಡುವುದು ಸರಿಯಲ್ಲ. ನಾವು ವಸ್ತುಸ್ಥಿತಿಯನ್ನು ನೋಡಿದ್ದೇವೆ. ಮಾನ್ಯ ಆರ್ಮುಗಂ ಅವರು ಹೇಳಿದಂತೆ ಈ ಪತ್ರಿಕೆಗಳು ಜನರು ಬಡ್ಡಿ ಕೊಟ್ಟು ಪತ್ರಿಕೆಗಳನ್ನು ಕೊಳ್ಳುವುದರಿಂದ ಏನು ಹಣ ಬರುತ್ತದೆ, ಅದರ ಬಲದ ಮೇಲೆ ನಡೆಯುವುದಿಲ್ಲ. ಸಾಧಾರಣ

ಪಾಗಿ ಜಾಹಿರಾತಿನಿಂದ ಬರುವ ಹಣ ಅದರಲ್ಲೂ ಮುಖ್ಯವಾಗಿ ಸರ್ಕಾರದವರು ಕೊಡತಕ್ಕಂಥ ವಿಶೇಷ ವಾದಂಥ ಜಾಹೀರಾತು ಹಣದ ಬಲದ ಮೇಲೆ ಇವು ನಡೆಯುತ್ತವೆ. ಆದರೆ ಇಲ್ಲಿ ಒಂದು ದೊಡ್ಡ ದುರಂತ ಏನಾಗಿದೆ ಎಂದರೆ, ಸರ್ಕಾರ ದೊಡ್ಡ ಪ್ರಮಾಣದಲ್ಲಿ ಜಾಹೀರಾತು ಕೊಟ್ಟರೂ ಕೂಡ ಆ ಜಾಹೀರಾತಿನ ಹಣ ಎಲ್ಲೆಲ್ಲಿ ಹೋಗುತ್ತದೋ ಗೊತ್ತಿಲ್ಲ. ಇದರಿಂದಲೇ ಈ ಪತ್ರಿಕೆಗಳು ಖಾಯಂ ಆಗಿ ನಡೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಜೊತೆಗೆ ಪತ್ರಿಕೆಗಳನ್ನು ನಡೆಸುವವರು ಕೇವಲ ಇದೊಂದೇ ವ್ಯವಹಾರ ಇಟ್ಟುಕೊಂಡಿರುವುದಿಲ್ಲ. ಹತ್ತಾರು ವ್ಯವಹಾರಗಳ ಜೊತೆಯಲ್ಲಿ ಇದನ್ನು ಸಹ ನಡೆಸುತ್ತಾರೆ. ಈ ಪತ್ರಿಕಾ ವೃತ್ತಿಯಲ್ಲಿರುವವರನ್ನು ಬಿಟ್ಟು ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಒಂದಲ್ಲ ಒಂದು ರೀತಿಯಿಂದ ನಾನಾ ರೀತಿಯ ಭರವಸೆಗಳಿದ್ದರೂ ಸಹ ಈ ಪತ್ರಿಕಾ ಕರ್ತರಿಗೆ ಯಾವ ಒಂದು ಭರವಸೆಯೂ ಇಲ್ಲದಂಥ ಒಂದು ಪರಿಸ್ಥಿತಿ ಇದೆ ನಮ್ಮ ಸಮಾಜದ ಅನೇಕ ಲೋಪದೋಷಗಳನ್ನು ಸರ್ಕಾರದ ಮತ್ತು ಜನರ ಗಮನಕ್ಕೆ ತರುವಂತಹ ಈ ಪತ್ರಿಕಾಕರ್ತರ ಪ್ರಶ್ನೆಯನ್ನು ನಾವು ಮಾನವೀಯ ದೃಷ್ಟಿಯಿಂದ ನೋಡಬೇಕಾಗಿದೆ. ಒಂದು ಮಹತ್ವದ ಪ್ರಶ್ನೆಯನ್ನಾಗಿ ನೋಡಬೇಕಾಗಿದೆ. ಆದಕಾರಣ ಮಾನ್ಯ ಮಂತ್ರಿಗಳು ತಕ್ಷಣವೇ ಒಂದು ಸಭೆಯನ್ನು ಕರೆದರೆ ನಾವುಗಳು ನಮ್ಮ ಕೈಲಾದ ಸಲಹೆಗಳನ್ನು ಕೊಡುತ್ತೇವೆ. ಸರ್ಕಾರದ ಮಟ್ಟದಲ್ಲಿ ಇದರ ಬಗ್ಗೆ ಚರ್ಚೆಯಾದರೆ ಒಂದು ಮಾರ್ಗವನ್ನು ತಕ್ಷಣವೇ ಕಂಡುಹಿಡಿಯುವುದಕ್ಕೆ ಸಾಧ್ಯವಿದೆ. ಶಾಶ್ವತವಾಗಿ ಈ ಸಮಸ್ಯೆಯನ್ನು ಬಗೆಹರಿಸುವುದು ಒಂದು ಆದರ್ಶವಾದರೆ, ತಕ್ಷಣವೇ ಈ ಪತ್ರಿಕೆ ಪ್ರಾರಂಭವಾಗುವಂತಹ ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ. ಏಕೆಂದರೆ, ಇದು ಬಹಳ ದಿವಸಗಳ ಕಾಲ ನಿಂತುಹೋದರೆ, ಮುಂದೆ ಅದಕ್ಕೆ ನಾವು ಎಷ್ಟೇ ಎಣ್ಣೆಯನ್ನು ಸುರಿದು ಪ್ರಾರಂಭ ಮಾಡುವುದಕ್ಕೆ ಹೋದರೂ ಸಹ ಅದನ್ನು ಚಾಲನೆ ಮಾಡುವುದು ಕಷ್ಟವಾಗುತ್ತದೆ. ಆದಕಾರಣ ಬೇಗನೇ ಸಂಬಂಧಪಟ್ಟ ಎಲ್ಲರ ಒಂದು ಸಭೆಯನ್ನು ಕರೆಯಬೇಕು. ಇದನ್ನು ತಾವು ಕಾರ್ಮಿಕ ಕಮಿಷನರ್ ಅವರಿಗೇ ಬಿಟ್ಟರೆ ಸರಿಹೋಗುವುದಿಲ್ಲ, ಸರ್ಕಾರದ ಮಟ್ಟದಲ್ಲಿ ತಾವು ಸಭೆ ಸೇರಿಸಬೇಕು ಮತ್ತು ಇದಕ್ಕೆ ಒಂದು ಪರಿಹಾರ ಕಂಡುಹಿಡಿಯುವುದಕ್ಕೆ ಒಂದು ಅವಕಾಶ ಮಾಡಿಕೊಡಬೇಕೆಂದು ಸೂಚಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ .— ಸ್ವಾಮಿ, ನಾವು ಇಲ್ಲಿ ಸರ್ಕಾರದಿಂದ ನಿರೀಕ್ಷೆ ಮಾಡುವುದೇನೆಂದರೆ, ಇದನ್ನು ಕೇವಲ ಮಾನವೀಯ ದೃಷ್ಟಿಯಿಂದ ನೋಡುವುದು ಅಷ್ಟೇ ಅಲ್ಲ. ಕಾನೂನಿನ ದೃಷ್ಟಿಯಿಂದಲೂ ಇದನ್ನು ನೋಡಬೇಕಾಗಿದೆ. ಮಾಲೀಕರಿಗೆ ಇದನ್ನು ನಡೆಸುವುದಕ್ಕೆ ಆಗದಿದ್ದರೆ ಸರ್ಕಾರವೇ ಹಣ ಕೊಟ್ಟು ಅಲ್ಲಿರುವ ಕಾರ್ಮಿಕರ ಒಂದು ಜವಾಬ್ದಾರಿಯಿಂದ ನಡೆಸುವುದಕ್ಕೆ ಸಾಧ್ಯವೇ ಬಂದುದನ್ನು ಸರ್ಕಾರ ನೋಡಬೇಕು. ಏಕೆಂದರೆ ಇದ್ದ ಮೂರು ಕನ್ನಡ ಪತ್ರಿಕೆಗಳ ಪೈಕಿ ಒಂದು ಮುಚ್ಚಿರುವುದು ನಮಗೆ ಒಂದು ರೀತಿಯ ಕೊರತೆಯನ್ನುಂಟು ಮಾಡಿದೆ. ೮೦ ಥಿಯೇಟರುಗಳ ಪೈಕಿ ಒಂದು ಮುಚ್ಚಿದರೆ ಯಾರೂ ಯೋಚನೆ ಮಾಡುವುದಿಲ್ಲ. ೧೦೦ ಹೋಟೆಲುಗಳ ಪೈಕಿ ಒಂದನ್ನು ಮುಚ್ಚಿದರೆ ಯಾರೂ ಯೋಚನೆ ಮಾಡುವುದಿಲ್ಲ. ಆದರೆ ಇದ್ದ ಕೇವಲ ೩ ಪತ್ರಿಕೆಗಳ ಪೈಕಿ ಒಂದು ಮುಚ್ಚಿರುವುದು ಕನ್ನಡಿಗರಿಗೆ ಯೋಚನೆಯಾಗಿದೆ. ಆದ್ದರಿಂದ ಅಲ್ಲಿನ ಕೆಲಸಗಾರರೇ ನಡೆಸುವುದಕ್ಕೆ ತಯಾರಿದ್ದರೆ ಅವರಿಗೆ ಬಂದವಾಳ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು; ಮತ್ತು ತಾವು ತ್ರಿಪಕ್ಷೀಯ ಸಭೆ ಕರೆದು ಮಾಲೀಕರಿಗೆ ಇದನ್ನು ನಡೆಸುವಂತೆ ಕೇಳಬೇಕು, ಅವರು ಆಗುವುದಿಲ್ಲವೆಂದು ಹೇಳಿದರೆ, ಸರ್ಕಾರದವರೇ ಸಿಕ್-ಇಂಡಸ್ಟ್ರೀಸ್ ಆಕ್ಟ್ ಪ್ರಕಾರ ಇದನ್ನು ತೆಗೆದುಕೊಂಡು ಸರ್ಕಾರದಿಂದಲೇ ನಡೆಸುತ್ತೀರಾ ಎಂಬುದನ್ನು ಹೇಳಬೇಕು;

ಶ್ರೀ ಬಿ. ವಿ. ಕಕ್ಕಿಲ್ಲಾಯ.— ಸ್ವಾಮಿ, ಈ ಪತ್ರಿಕೆಯು ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈಗ ಪತ್ರಿಕಾ ಮಾಲೀಕರ ಅವ್ಯವಹಾರದಿಂದ ಅದು ನಿಂತುಹೋಗಿರಬಹುದು. ಆದರೆ ಅಲ್ಲಿನ ಕಾರ್ಮಿಕರೇ ಅದನ್ನು ನಡೆಸುವುದಕ್ಕೆ ತಯಾರಿದ್ದರೆ ಅವರ ಸ್ವಾಧೀನಕ್ಕೆ ಕೊಡಬೇಕು. ಒಟ್ಟಿನಲ್ಲಿ ಸರ್ಕಾರಕ್ಕೆ ಇರುವಂತಹ ವಿಶೇಷ ಅಧಿಕಾರವನ್ನು ಉಪಯೋಗಿಸಿ ಆ ಪತ್ರಿಕೆಯನ್ನು ಮತ್ತೆ ನಡೆಸುವಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ

ಶ್ರೀ ಮೈಕೇಲ್ ಫರ್ನಾಂಡೀಸ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸುಬ್ಬಯ್ಯನವರು ಮಾತನಾಡುವಾಗ ಸರ್ಕಾರದವರು ಇದನ್ನು ಕಾರ್ಮಿಕರ ಸಮಸ್ಯೆಯಂತೆ ಕಂಡಿದ್ದಾರೆಂದು ಹೇಳಿದರು. ಆದರೆ ನನಗೆ ತಿಳಿದಂತೆ ಸರ್ಕಾರ ಆ ರೀತಿ ಕಂಡಿಲ್ಲ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ change in the condition of service ಆಗಬೇಕಾದರೆ ಮೂರು ವಾರದ ನೋಟೀಸನ್ನು ಕೊಡಬೇಕಾಗುತ್ತದೆ, ಆದರೆ ಇಲ್ಲಿ ಒಂದು ದಿವಸದ ಮುಂಚೆ ಕೊಟ್ಟಿದ್ದಾರೆ. ಜನವರಿ ೩೧ ರಂದು ನೋಟೀಸ್ ಕೊಟ್ಟು

ಫೆಬ್ರವರಿ ಒಂದರಂದು ಮುಚ್ಚಿದ್ದಾರೆ. ಕಾನೂನಿನ ರೀತ್ಯಾ ಮೊದಲೇ ನೋಟೀಸ್ ಕೊಟ್ಟಿಲ್ಲವಾದ ಕಾರಣ, ಇಲ್ಲಿ ಒಂದು ಹೊಸ ಪ್ರವೃತ್ತಿ ಬೆಳೆದಿದೆ. ಇದನ್ನು ಇದೇ ರೀತಿ ಬಿಟ್ಟರೆ ಮುಂದೆ ಬೇರೆ ಚಿಕ್ಕಪುಟ್ಟ ಸಂಸ್ಥೆಗಳು ಸಹ ಇದೇ ಪ್ರವೃತ್ತಿಯನ್ನು ಬೆಳೆಸಿಕೊಂಡು ಹೋಗಬಹುದು. ಆದ್ದರಿಂದ ಅವರು ಏಕೆ ಈ ರೀತಿ ಮಾಡಿದ್ದಾರೆಂಬುದನ್ನು ನೋಡಬೇಕು. ಇಲ್ಲಿ ಕಾರ್ಮಿಕರ ಕಡೆಯಿಂದ ಬೇಡಿಕೆಗಳೂ ಸಹ ಇರಲಿಲ್ಲ. ಬೇರೆ ಸಂಸ್ಥೆಗಳಲ್ಲಿ ಯಾದರೆ ಅಲ್ಲಿನ ನೌಕರರು ಬೇಡಿಕೆಗಳನ್ನಿಟ್ಟು ಚಳುವಳಿ ಮಾಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಲಾಕೌಟ್ ಆಗುವುದುಂಟು ಆದರೆ ಇಲ್ಲಿ ಆ ರೀತಿ ಸಹ ಆಗಿಲ್ಲ. ವಿನಾಕಾರಣ ಮುಚ್ಚಿದ್ದಾರೆ ಕೇಂದ್ರ ಸರ್ಕಾರದವರು ಈ ಮೊದಲು ನ್ಯೂಸ್-ಪೇಪರ್ ಇಂಡಸ್ಟ್ರಿಯನ್ನು ಕೆಲವೇ ಇಟ್ಟುಕೊಳ್ಳುವುದು ಸರಿಯಲ್ಲವೆಂದು ಹೇಳುತ್ತಿದ್ದರು. ಆದೇರೀತಿ ಇಲ್ಲಿ ಈ ಪತ್ರಿಕಾ ಮಾಲೀಕರು ಇದನ್ನು ನಡೆಸಲು ಒಪ್ಪದಿದ್ದರೆ, ಅಲ್ಲಿರುವ ೩೦೦ ಜನ ಕಾರ್ಮಿಕರು ಒಂದು ಸಂಸ್ಥೆ ಮಾಡಿಕೊಂಡು ಪ್ರಾರಂಭ ಮಾಡಬಹುದು. ಸರ್ಕಾರದವರು ಅವರಿಗೆ ಸಾಲದ ರೂಪದಲ್ಲಿ ಸಹಾಯ ಮಾಡಿದರೆ, ಅವರೇ ನಡೆಸುತ್ತಾರೆ. ಈಗ ಸರ್ಕಾರದ ಹೇಳಿಕೆ ಪ್ರಕಾರ ಯಾರೇ ಮುಂದೆಬಂದರೂ ಸಹಕಾರ ಕೊಡಲಾಗುತ್ತದೆಂದು ಹೇಳಿರುವುದರಿಂದ, ಕಾರ್ಮಿಕರೇ ಇಲ್ಲಿ ಮುಂದೆ ಬಂದರೆ ಅವರಿಗೆ ವಹಿಸಿಕೊಡುವುದು ಒಳ್ಳೆಯದು. ಇದೂ ಒಂದು ರೀತಿಯ ಪ್ರಯೋಗ ನಡೆಯಲಿ, ಈ ಕಾರ್ಮಿಕರಿಗೆ ಸರ್ಕಾರದವರು ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ (ಕಾರ್ಮಿಕ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಏನು ಈ ಪತ್ರಿಕೆ ಮುಚ್ಚಿರುವ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದ್ದಾರೆ ಅಷ್ಟೇ ಕಳವಳ ಸರ್ಕಾರಕ್ಕೂ ಕೂಡ ಇದೆ. ನಾನು ೨೫ನೇ ತಾರೀಖು ಪ್ರಮಾಣವಚನ ಸ್ವೀಕಾರ ಮಾಡಿದ ಮೇಲೆ ೨೬ನೇ ತಾರೀಖಿನ ದಿವಸ ಈ ಪತ್ರಿಕಾ ಪ್ರತಿನಿಧಿಗಳು ಯಾರೂ ನನ್ನ ಹತ್ತಿರ ಬರಲಿಲ್ಲ. ಅವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆಂಬುದು ನನಗೆ ತಿಳಿದುಬಂದಮೇಲೆ ನಾನೇ ಖುದ್ದಾಗಿ ಹೋಗಿ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡೆ, ಏನೆಂದರೆ, ತಾವು ಮಾರನೇ ದಿವಸ ನನ್ನ ಛೇಂಬರ್‌ಗೆ ಬರಬೇಕು, ತಮ್ಮ ಅಹವಾಲು ಏನಿದೆ ಎಂಬುದನ್ನು ತಿಳಿಸಿ ಎಂದು ಅವರಲ್ಲಿ ನಾನು ಪ್ರಾರ್ಥನೆ ಮಾಡಿಕೊಂಡು ಆಹ್ವಾನ ಕೊಟ್ಟು ಬಂದೆ. ಆದರೆ ಮಾರನೇ ದಿವಸ ಅವರು ಕಾರಣಾಂತರದಿಂದ ನನ್ನಲ್ಲಿಗೆ ಬರಲಿಲ್ಲ ತಡವಾಗಿ ಬಂದರು. ಕೊನೆಗೆ ಅವರಲ್ಲಿ ಪ್ರಾರ್ಥನೆ ಮಾಡಿದೆ. ಏನೆಂದರೆ ಇವೊತ್ತು ನನ್ನ ಛೇಂಬರ್‌ಗೆ ಬನ್ನಿ, ನಿನ್ನೆದಿವಸ ಮೇಲ್ಮನೆಯಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗ, ಅಲ್ಲಿನ ಮಾನ್ಯ ಸದಸ್ಯರು ಈ ಬಗ್ಗೆ ಒಂದು ಮೀಟಿಂಗ್ ಕರೆಯಿರಿ ಎಂದು ಹೇಳಿದಾಗ, ನಾನು ಆದಷ್ಟು ಬೇಗ ಮೀಟಿಂಗ್ ಕರೆಯುತ್ತೇನೆಂದು ಅವರಿಗೆ ತಿಳಿಸಿದೆ ಎಂಬುದಾಗಿ ಅವರಿಗೆ ತಿಳಿಸಿದೆ. ಈ ವಿಚಾರದಲ್ಲಿ ನಾವು ಇವೊತ್ತು ಕೂತುಕೊಂಡು ಒಂದು ತೀರ್ಮಾನ ಮಾಡಿದ್ದೇವೆ, ಏನೆಂದರೆ, ೫ನೇ ತಾರೀಖಿನ ದಿವಸ ಸಾಯಂಕಾಲ ೬ ಘಂಟೆಗೆ ಪತ್ರಿಕಾ ಪ್ರತಿನಿಧಿಗಳು ಮತ್ತು ಆ ಪತ್ರಿಕೆಯ ಮಾಲೀಕರನ್ನು ಒಳಗೊಂಡಂತೆ ಒಂದು ಜಂಟೀ ಸಭೆಯನ್ನು ಕರೆಯಬೇಕೆಂದು. ಈ ಪ್ರಥಮ ಸಭೆ ಮುಗಿದ ಬಳಿಕ ಪುನಃ ಮೇಲ್ಮನೆ ಮತ್ತು ಕೆಳಮನೆಯ ವಿರೋಧಪಕ್ಷದ ಮುಖಂಡರು ಏನಿದ್ದಾರೆ, ಅವರ ಸಭೆಯನ್ನು ನನ್ನ ಛೇಂಬರ್‌ನಲ್ಲಿ ಕರೆಯಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು, ಮಾನ್ಯ ಆರ್ಮುಗಂರವರು, ಮಾನ್ಯ ಬೊಮ್ಮಾಯಿಯವರು. ಮಾನ್ಯ ಶ್ರೀನಿವಾಸ್ ಅವರು ಮಾತನಾಡತಕ್ಕ ಸಂದರ್ಭದಲ್ಲಿ ಕೆಲವೊಂದು ಸರಿಯಾದ ವಿಚಾರಗಳನ್ನು ಹೇಳಿದರು. ಕಾನೂನು ಪ್ರಕಾರ ಹೋದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಕಾರಣ ಅವರು ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ ಇದನ್ನು ತೆಗೆದುಕೊಳ್ಳಬೇಕಾದರೆ ಮಾನವೀಯತೆಯ ಆಧಾರದ ಮೇಲೆ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಇದು ಹಳೆಯ ಪತ್ರಿಕೆ, ಸ್ವಾತಂತ್ರ್ಯ ಹೋರಾಟಕಾಲದಲ್ಲಿ ಭಾಗವಹಿಸಿದಂಥ ಪತ್ರಿಕೆ, ಇದು ಒಂದು ಮಾನ್ಯುಮೆಂಟಾಗಿ ಇಡಬೇಕಾದಂಥ ಪತ್ರಿಕೆ, ಶ್ರೇಷ್ಠತೆಯನ್ನು ಪಡೆದಿರತಕ್ಕ ಪತ್ರಿಕೆ. ಇದನ್ನು ಮುಚ್ಚಿರುವುದರಲ್ಲಿ ಸರ್ಕಾರಕ್ಕೆ ಜನತೆಗೆ ಕಳಕಳಿ ಇದೆ. ನಾನು ೫ನೇ ತಾರೀಖು ಒಂದು ಸಭೆಯನ್ನು ಕರೆದಿದ್ದೇನೆ, ಮಾನ್ಯ ಸುಬ್ಬಯ್ಯಶೆಟ್ಟರೂ ಕೂಡ ಇದರ ಬಗ್ಗೆ ಹೇಳಿದ್ದಾರೆ! ನಾವು ಮನಸ್ಸು ಮಾಡುವುದಕ್ಕಿಂತ ಹೆಚ್ಚಾಗಿ ನೀವು ಮನಸ್ಸು ಮಾಡಿದರೆ ಪತ್ರಿಕೆಯನ್ನು ಬೇಗ ತೆಗೆಸಬಹುದು. ಇದರ ಹಿನ್ನೆಲೆ ಏನು ಎನ್ನುವುದು ತಮಗೆ ಗೊತ್ತಿದೆ. ನನ್ನ ವೈಟ್‌ಗಿಂತ ನಿಮ್ಮ ವೈಟನ್ನು ಅವರ ಮೇಲೆ ಹಾಕಿದರೆ ಉಪಯೋಗವಾಗಬಹುದು, ಶ್ರೀ ಬಸವರಾಜ ಅವರನ್ನು ರಿಸೀವರ್ ಆಗಿ ನೇಮಕ ಮಾಡಿದ್ದಾರೆ. ಸರ್ಕಾರ ನೇರವಾಗಿ ಹೋಗುವುದಕ್ಕೆ ತೊಂದರೆಯಾಗುತ್ತದೆ. ಇವತ್ತು ಏನು ಮಾತನಾಡಿದ್ದೀರಿ ಇದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ೫ನೇ ತಾರೀಖು ಇದನ್ನು ಚರ್ಚೆ ಮಾಡುತ್ತೇನೆ. ತಮ್ಮೆಲ್ಲ

ರನ್ನೂ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸರ್ಕಾರದ ಜೊತೆಯಲ್ಲಿ ತಾವೆಲ್ಲರೂ ಸಹಕರಿಸಿ, ನಿಮ್ಮೆಲ್ಲರನ್ನೂ ಚರ್ಚೆಗೆ ಆಹ್ವಾನಿಸುತ್ತೇನೆ, ಆ ಸಂದರ್ಭದಲ್ಲಿ ಉತ್ತಮವಾದ ಸಲಹೆಗಳನ್ನು ಕೊಡಿ. ಕಾನೂನು ಪ್ರಕಾರ ಅವರಿಗೆ ಕೊಡಬೇಕಾದುದನ್ನು ಕೊಡಿ ಎಂದು ಹೇಳಿದಿರಿ. ಬೂಲೀಕರಿಂದ ಕಾರ್ಮಿಕರಿಗೆ ಬರಬೇಕಾದುದರಲ್ಲಿ ಎಳ್ಳಷ್ಟೂ ಗುಲಗಂಜಿಯಷ್ಟೂ ಬಿಡುವುದಿಲ್ಲ. ಇದರಲ್ಲಿ ಕಾನೂನು ತೊಡಕು ಇರುವುದರಿಂದ ಸರ್ಕಾರ ಇದನ್ನು ತೆಗೆದುಕೊಳ್ಳಬೇಕಾದರೆ ಲಕ್ಷಾಂತರ ರೂಪಾಯಿಗಳ ಪ್ರಶ್ನೆ ಇದೆ. ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ.

ಛೇರ್ಮನ್.— ಕಾನೂನಿನ ಪ್ರತಿಬಂಧಕಗಳೇನಾದರೂ ಬಂದರೆ, ಸರ್ಕಾರ ಇದನ್ನು ಬೇರೆ ರೂಪದಲ್ಲಿ ಏನಾದರೂ...

ಶ್ರೀ ಸಿ. ಎಂ. ಇಬ್ರಾಹಿಂ.— ಕೋರ್ಟಿನಲ್ಲಿ ಈ ಪ್ರಶ್ನೆ ಇರುವುದರಿಂದ ನಾವು ವಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾನು ಮಿಾಟಿಂಗ್ ಕರೆಯುತ್ತೇನೆ, ಮಾನ್ಯ ಸದಸ್ಯರು ಬಂದು ಸಲಹೆಗಳನ್ನು ಕೊಡಿ.

SRI A. LAKSHMI SAGAR:—My one of the suggestions made with all seriousness was that all parties are more or less agreed for filing an application before the Learned Judge Dharwad, for appointment of a Commissioner under Bombay Trust Act. The Charity Commissioner may be appointed as a Receiver by agreement of all parties. If that happens, in him would be vested all movable and imovable properties of the Jai-Karnataka Printers Private Ltd. If that were to happen he would be an agent under the Government because he acts under the Bombay Charity Commission Act. To him the Government may render assistance, other financial instutitions may also render assistance, in which case if there is any financial stringency, as alleged by the present management of the Paper, it can also be overcome subsequently. Is the Government prepared to instruct the Advocate General to file before the District Judge, Dharwad for an application for appointment to the Charity Commissioner as the Receiver of the entire property.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ್ದರಲ್ಲಿ ಒಂದು ತೊಂದರೆ ಇದೆ. ಏನೆಂದರೆ, ಈ ಪ್ರಿಂಟಿಂಗ್ ಪ್ರೆಸ್‌ನವರು ಬೇರೆ ಎರೆಡು ಪೇಪರ್‌ಗಳನ್ನು ಪ್ರಿಂಟ್ ಮಾಡಿಸುತ್ತಾ ಇದ್ದಾರೆ. ಇದಕ್ಕೆ ಅಗ್ರಿಮೆಂಟ್ ಆಗಿದೆ. ಆದಕಾರಣ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಈಗಾಗಲೇ ೫ನೇ ತಾರೀಖು ಚರ್ಚೆ ಮಾಡೋಣ ಎಂದು ಹೇಳಿದ್ದೇನೆ. ಸುಮ್ಮನೆ ಪ್ರೊಲಾಂಗ್ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ನಾನು ಸಭೆ ಕರೆಯುತ್ತೇನೆ, ಅಲ್ಲಿ ಉಭಯತ್ರರೂ ಇರುತ್ತಾರೆ. ತಾವುಗಳು ಬಂದು ಸಲಹೆಗಳನ್ನು ಕೊಡಿ, ಇದಕ್ಕೆ ಪರಿಹಾರ ಕಂಡು ಹಿಡಿಯೋಣ.

ಶ್ರೀ ಹೆಚ್. ಡಿ. ದೇವೇಗೌಡ.—ಹೊಸ ಸರ್ಕಾರಕ್ಕೆ ಕಾರ್ಮಿಕರ ಬಗ್ಗೆ ಅನುಕಂಪ ಇದೆ ಎಂದೆ ಕಾಣುತ್ತದೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ವಿಶಾಲ ಕರ್ನಾಟಕ ಪತ್ರಿಕೆಯ ಬಗ್ಗೆ ಈ ಸಭೆಯಲ್ಲಿ ಬಹಳ ಚರ್ಚೆ ಮಾಡಿದೆವು. ಚರ್ಚೆಯಾಯಿತು, ಆದರಲ್ಲಿ ಭಾಗವಹಿಸಿದವರಿಗೆ ನಮಗೆ ೫೧ ರೂಪಾಯಿ ಬಂತು. ಆದರೆ ಆ ಪೇಪರಿನ ನೌಕರರು ಮನೆಗೆ ಹೋದರು. ಇದು ನಮ್ಮ ಅನುಭವ. ಆಗಿನ ಕಾರ್ಮಿಕ ಮಂತ್ರಿಗಳು ಆ ಕಡೆ ಇದ್ದರು, ಈಗ ಈ ಕಡೆ ಬಂದಿದ್ದಾರೆ. ೪೮ ಗಂಟೆಗಳಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಸಂತೋಷ. ಆದರೆ ಈ ವಿಷಯದಲ್ಲಿ ಹೈಕೋರ್ಟಿನಲ್ಲಿ ಸ್ಟೇ ಇದೆ ಎಂದು ಕೇಳಿದ್ದೇನೆ. ಈ ತರಹ ಆರ್ಡರನ್ನು ವೆಕೇಟ್ ಮಾಡಿಸುವುದಕ್ಕೆ ಅಡ್ವೊಕೇಟ್ ಜನರಲ್‌ರನ್ನು ಕರೆದು ಹೈಕೋರ್ಟನ್ನು ಅಪ್ರೋಚ್ ಮಾಡಿ ಎಂದು ಹೇಳಿ. ನಾನು ಕಾನೂನು ತಜ್ಞ ಆಲ್ಲ, ವ್ಯವಹಾರಿಕ ಧರ್ಮವನ್ನು ಹೇಳುತ್ತಿದ್ದೇನೆ. ಅವರು ಶ್ರೀಬಸವರಾಜ್ ಅವರನ್ನು ರಿಸೀವರನ್ನಾಗಿ ಮಾಡಿದೆ ಎಂದು

ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಈ ವ್ಯವಹಾರದ ಬಗ್ಗೆ ಅಂತಿಮ ನಿರ್ಣಯವಾಗುವವರೆಗೆ ಈ ಪತ್ರಿಕೆಯನ್ನು ಚಾರಿಟಿ ಕಮಿಷನ್ ಮುಖೇನ ನಡೆಸುವುದಕ್ಕೆ ಸಾಧ್ಯವೇ. ಏಕೆಂದರೆ,ಚಾರಿಟಿ ಕಮಿಷನ್ ಸರ್ಕಾರದ ಹತೋಟಿಯಲ್ಲಿದೆ. ಇದರ ಬಗ್ಗೆ ಶ್ರೀಮಾನ್ ಜೆ.ಹೆಚ್. ಪಟೇಲರು ಹೇಳಿದ್ದು ಸ್ವಲ್ಪ ಕಷ್ಟವಾಗಬಹುದು. ಚಾರಿಟಿ ಕಮಿಷನ್‌ನವರಿಗೆ ತಿಳಿಸಿ, ಈ ವ್ಯವಹಾರವೆಲ್ಲಾ ಅಂತಿಮವಾಗಿ ಇತ್ಯರ್ಥವಾಗುವವರೆಗೆ ಚಾರಿಟಿಕಮಿಷನ್‌ನವರು ಈ ಪತ್ರಿಕೆಯ ವ್ಯವಹಾರವನ್ನು ನಡೆಸುವುದಕ್ಕೆ ಸಾಧ್ಯ ಎನ್ನುವುದು ನನ್ನ ಭಾವನೆ. ಇದನ್ನೆಲ್ಲಾ ತಮ್ಮ ಚೇಂಬರಿನಲ್ಲಿ ಹೇಳುವುದಕ್ಕಾಗುವುದಿಲ್ಲ. ಚಾರಿಟಿ ಕಮಿಷನ್‌ನವರು ತೆಗೆದುಕೊಂಡು ಈ ಪತ್ರಿಕೆಯನ್ನು ನಡೆಸುವಾಗ, ಅಲ್ಲಿ ನೌಕರ ವರ್ಗ, ಸಿಬ್ಬಂದಿವರ್ಗ ಯಾರಿದ್ದಾರೆ ಅವರೆಲ್ಲರಿಗೂ ಯಾವುದೇ ರೀತಿಯಲ್ಲೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುವುದು ಅವರ ಜವಾಬ್ದಾರಿ. ಈ ಪತ್ರಿಕೆಯಲ್ಲಿ ಕೆಲಸ ಮಾಡಿಕೊಂಡು ಬಂದಿರತಕ್ಕ ಯಾವುದೇ ನೌಕರ ವರ್ಗದವರಿಗೂ ತೊಂದರೆಯಾಗಬಾರದು. ೨೫೦ ಜನರನ್ನು ಮೇಂಟೈನ್ ಮಾಡುವುದಕ್ಕೆ ಆಗುವುದಿಲ್ಲ, ಸರ್ಕುಲೇಷನ್ ಕಡಿಮೆ ಇದೆ, ೫೦ ಜನರನ್ನು ಕೈ ಬಿಡುತ್ತೇವೆ ಎಂದು ಹೇಳಬಹುದು. ಯಾವುದೇ ಸಿಬ್ಬಂದಿವರ್ಗವನ್ನು ಕೈ ಬಿಡಬಾರದು, ಪ್ರತಿಯೊಬ್ಬರನ್ನೂ ನೇಮಿಸಿಕೊಳ್ಳಬೇಕು. ಒಂದು ವರ್ಷದ ಬೋನಸ್ಸನ್ನು ಕೊಡಬೇಕು ಎಂದು ಅವರು ಹೇಳಿದ್ದಾರೆ. ಅದನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಸರ್ಕಾರಕ್ಕೆ ಶಕ್ತಿ ಇಲ್ಲ ಎಂದು ನಾನು ಅಂದುಕೊಳ್ಳುವುದಿಲ್ಲ. ಕಾರ್ಮಿಕ ಸಚಿವರು, ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಸಾರ್ವಜನಿಕವಾಗಿ ಹೇಳಿದ್ದಾರೆ ; ಸಾರ್ವಜನಿಕ ಸಭೆಗಳಲ್ಲಿ ಹೇಳಿದ್ದಾರೆ, ಹೇಳಿ ಒಂದು ತಿಂಗಳಾಯಿತು ಎಂದು ನನ್ನ ಭಾವನೆ. ಉನ್ನತಮಟ್ಟದ ಸ್ಥಾನದಲ್ಲಿ ಯಾರಿದ್ದಾರೋ ಗೊತ್ತಿಲ್ಲ. ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ವಿಳಂಬ ಏಕೆ ಆಯಿತೊ ಗೊತ್ತಿಲ್ಲ. ಸರ್ಕಾರ ಮನಸ್ಸು ಮಾಡಿದರೆ ಈ ಪತ್ರಿಕೆಯನ್ನು ನಡೆಸುವುದಕ್ಕೆ ಅಷ್ಟೊಂದು ದೊಡ್ಡ ಅಡಚಣೆ ಇದೆಯೆಂದು ನಾನು ಅಂದುಕೊಳ್ಳುವುದಿಲ್ಲ. ಚಾರಿಟಿ ಕಮಿಷನ್ ಮುಖೇನ ಏಕೆ ಮಾಡಿಸಬಾರದು.

† ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳವರು ಸಾಮಾನ್ಯವಾದ ಉತ್ತರವನ್ನು ಕೊಟ್ಟಿದ್ದಾರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ತಮಗೆ ಹೇಳುವುದಾದರೆ ಇವತ್ತಿನ ದಿವಸ ನಮ್ಮ ದೇಶದಲ್ಲಿ ದುರ್ದೈವದಿಂದ ಸಾಕಷ್ಟು ಪತ್ರಿಕೆಗಳೆಲ್ಲಾ ಬಂಡವಾಳಶಾಹಿಯವರ ಕೈಯಲ್ಲಿವೆ. ಅವರು ಏನು ಮಾಡುತ್ತಿದ್ದಾರೆಂದರೆ ತಮ್ಮ ಸ್ವಂತ ಹಣವನ್ನಾಗಿ ಮಾಡಿಕೊಳ್ಳುವುದಕ್ಕೆ ಯಾವ ಯಾವ ರೀತಿಯಲ್ಲಿ ಬೇಕೋ ಆ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ ಈಗ ಮುಚ್ಚಿರತಕ್ಕ ಪತ್ರಿಕೆಯನ್ನು ಸರಿಯಾದ ರೀತಿಯಲ್ಲಿ ನಡೆಸಬೇಕಾದರೆ ಅತಿ ಶೀಘ್ರವಾಗಿ ನಡೆಸುವುದಕ್ಕೆ ಪ್ರಯತ್ನ ಮಾಡಬೇಕಾದರೆ, ಸರ್ಕಾರದ ಧೋರಣೆ ಏನು ಎನ್ನತಕ್ಕದ್ದನ್ನು ಅವರು ನಿರ್ದಿಷ್ಟವಾಗಿ ಹೇಳಲಿ. ಅದನ್ನು ಅವರು ದಯವಿಟ್ಟು ಹೇಳಬೇಕು. ಇವತ್ತು ಬಂಡವಾಳಶಾಹಿಗಳ ಕೈಯಲ್ಲಿ ಏನು ಈ ಪತ್ರಿಕೆ ಇದೆ ಅವರಿಗೆ ಇದರಲ್ಲಿ ಇದ್ದಂಥ ಆಸ್ತಿಯ ಮೇಲೆ ಕಣ್ಣಿದೆ ಅದಕ್ಕೋಸ್ಕರವಾಗಿ ಅವರು ಈ ರೀತಿ ನಡೆಸುತ್ತಿದ್ದಾರೆ. ಆ ಟ್ರಸ್ಟ್‌ನಲ್ಲಿ ಯಾರು ಯಾರು ಮೆಂಬರ್ಸ್ ಇದ್ದಾರೆ ಅವರನ್ನು ತಮ್ಮ ಕಡೆಗೆ ಎಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಕೆಲವು ಟ್ರಸ್ಟ್ ಮೆಂಬರ್ಸ್ ಅವರ ಜೊತೆಯಲ್ಲಿ ಸೇರಿಕೊಂಡಿದ್ದಾರೆ ಎಂದು ಕೇಳಿದ್ದೇನೆ. ಮಾನ್ಯ ಮಂತ್ರಿಗಳವರು ಸಹ ಮಾತನಾಡುತ್ತಾ ಹೇಳಿದರು ಇದು ಬಹಳ ಪ್ರಾಮುಖ್ಯವಾದ ಪತ್ರಿಕೆ, ಇದು ಸಾಕಷ್ಟು ಕಾಲದಿಂದ ದುಡಿಯುತ್ತಾ ಬಂದಿದೆ, ಸ್ವಾತಂತ್ರ್ಯಕ್ಕಾಗಿ ದುಡಿದಂಥ ಪತ್ರಿಕೆ ಎಂದು ಹೇಳಿದರು. ಅಷ್ಟೇ ಅಲ್ಲದೆ ಇವತ್ತು ೩ ಕೋಟಿ ಜನಸಂಖ್ಯೆ ಇರುವ ಕನ್ನಡಿಗರಿಗೆ ಇರತಕ್ಕಂಥದ್ದು ಕೇವಲ ಕೆಲವೇ ಕನ್ನಡ ಪತ್ರಿಕೆಗಳು. ಇದು ಬಹಳ ಕಾಲದಿಂದಲೂ ರಾಷ್ಟ್ರದ ಮತ್ತು ನಮ್ಮ ರಾಜ್ಯದ ಒಂದು ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡಿರತಕ್ಕ ಪತ್ರಿಕೆ. ಇದರ ಬಗ್ಗೆ ಮಾನ್ಯ ಶ್ರೀ ಜೆ. ಹೆಚ್. ಪಟೇಲ್‌ರವರು ಮತ್ತು ಜಾರ್ಜ್ ಫರ್ನಾಂಡೀಸ್‌ರವರು ಒಂದು ಸಲಹೆ ಕೊಟ್ಟಿದ್ದಾರೆ.

ಛೇರ್ಮನ್.—ಪತ್ರಿಕೆಯನ್ನು ಪುನಃ ಪ್ರಾರಂಭ ಮಾಡುವ ಬಗ್ಗೆ ಹೇಳಿದ ಮೇಲೆ ಮತ್ತೆ ಏತಕ್ಕೆ... ಕಾನೂನೇತರ ಸಲಹೆ ಏನಾದರೂ ಇದ್ದರೆ ಕೊಡಿ.

ಶ್ರೀ ಎಂ ವಿ. ರಾಜಶೇಖರನ್.—ಇವತ್ತು ಹಣದ ತೊಂದರೆ ಸರ್ಕಾರಕ್ಕೆ ಏನಾದರೂ ಇದ್ದರೆ ಅಲ್ಲಿಯ ಕಾರ್ಮಿಕರು ಮತ್ತು ಪತ್ರಿಕೋದ್ಯಮಿಗಳ ಜೊತೆ ಸೇರಿ ಅದನ್ನು ಪುನಃ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ಇದರ ಬಗ್ಗೆ ಸ್ಪಷ್ಟ ನಿಲುವು ಏನು ಎಂಬುದನ್ನು ಸರ್ಕಾರ ತಿಳಿಸಬೇಕು.

ಶ್ರೀ ಎಸ್. ಆರ್ ಬೊಮ್ಮಾಯಿ. —ಕಾನೂನೇತರ ಸಲಹೆ ಏನೆಂದರೆ, ಈಗಿನ ಕಾರ್ಮಿಕ ಮಂತ್ರಿಗಳವರು ಒಮ್ಮೆ ನನ್ನ ಪತ್ತಿರ ಪತ್ರಿಕೆಯನ್ನು ಪ್ರಾರಂಭ ಮಾಡುವ ಉತ್ಸಟ ಇಚ್ಛೆ ಇದೆಂದು ಹೇಳಿದ್ದರು, ಅವರು ಇದೇ ಪತ್ರಿಕೆಯನ್ನು ತೆಗೆದುಕೊಂಡು ಏತಕ್ಕೆ ನಡೆಸಬಾರದು, ಇವನ್ನೇ ತೆಗೆದುಕೊಂಡು ನಡೆಸಿದರೆ ಒಳ್ಳೆಯದು ಆಗುವುದಿಲ್ಲವೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಸಭಾಪತಿಗಳೇ, ಯಾವನಿಗೋ ಆಸೆ ಆಯಿತು. ಮದುವೆ ಆಗಬೇಕು ಅಂತ, ಮದುವೆ ಆದ, ಮದುವೆಯಾದ ಮೇಲೆ ಬಾಡಿಗೆ ಮನೆ ಮಾಡಿದ, ಅವನಿಗೆ ನಾಲ್ಕು ಮಕ್ಕಳಾಯಿತು ಅವನು ಆ ಮನೆಯನ್ನು ಬಿಟ್ಟು ಹೋಗುವಾಗ, ಈ ನಾಲ್ಕು ಮಕ್ಕಳು ನಿಮ್ಮ ಮನೆಯಲ್ಲಿ ಹುಟ್ಟಿವೆ ಆದುದರಿಂದ ನೀವೆ ಇಟ್ಟುಕೊಳ್ಳಿ ಅಂತ ಹೇಳಿದನಂತೆ. ಆ ರೀತಿ ಆಗುಬಾರದು. ಆದುದರಿಂದ ಮಾನ್ಯ ಸದಸ್ಯರುಗಳೆಲ್ಲಾ ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಇನೇ ತಾರೀಖಿನ ದಿವಸದ ಸಭೆಯಲ್ಲಿ ಪರಿಶೀಲನೆ ಮಾಡಲಾಗುತ್ತದೆ. ಮತ್ತೆ ಮಾನ್ಯ ಶ್ರೀ ದೇವೇಗೌಡರವರು ಮಾತನಾಡತಕ್ಕ ಸಂದರ್ಭದಲ್ಲಿ ೧ ತಿಂಗಳ ಹಿಂದೆಯೇ ಅಂತ ಹೇಳಿದರು, ನಿಜ ೧ ತಿಂಗಳಾಗಿದೆ. ಇದು ಕಾರ್ಮಿಕರ ಮಟ್ಟದಲ್ಲಿ ಹಂತಹಂತವಾಗಿ ವಿಷಯಂ ಚರ್ಚೆಯಾಗಿ ಇವತ್ತು ನನ್ನ ಲೆವೆಲ್‌ನಲ್ಲಿ ಚರ್ಚೆಯಾಗುವುದಕ್ಕೆ ಬಂದಿದೆ. ಅದು ೧ ತಿಂಗಳಿ ನಿಂದಲೂ ಪ್ರೊಸೆಸ್ ಆಗುತ್ತಾ ಬಂದಿದೆ. ಇನೇ ತಾರೀಖು ಆದ ಮೇಲೆ ನಿಮ್ಮೆಲ್ಲರನ್ನೂ ಕರೆಯುತೇನೆ ಆಗ ಏನಾದರೂ ಸಲಹೆಗಳು ಇದ್ದರೆ ನೀಡಿ.

SRI B. SUBBAIAH SHETTY.—You say that it has been processed since one month.

ಶ್ರೀ ಸಿ. ಎಂ. ಇಬ್ರಾಹಿಂ.—ತಾವು ಮಿನಿಸ್ಟರ್ ಆಗಿದ್ದವರು ಹೀಗೆ ಹೇಳಿದರೆ ಹೇಗೆ ? ಲೋಕ ಶಿಕ್ಷಣ ಟ್ರಸ್ಟ್ ಅಂತ ಆಗಲೇ ಆಯಿತು, ಆಗಲೇ ನೀವು ಇದನ್ನು ಸರಿಪಡಿಸಿದ್ದರೆ ಇಷ್ಟು ಆಗುತ್ತಲೇ ಇರ ಲಿಲ್ಲ. ಆಗೇನು ಕಣ್ಣುಮುಚ್ಚಿಕೊಂಡು ನೀವು ಕುಳಿತಿದ್ದೀರಾ ? ತಾವು ಆಗ ಸರಿಪಡಿಸಿದ್ದರೆ ಇಂಥಾ ಅನಾಹುತವೆ ಆಗುತ್ತಾ ಇರಲಿಲ್ಲ. ಇದಕ್ಕೆ ನೀವೇ ಜವಾಬ್ದಾರರು ಏತಕ್ಕೆ ಸುಮ್ಮನೆ ಬಾಯಿ ಬಡಿಸುತ್ತೀರಿ? ನೀವು ಆಗ ಕಣ್ಣುಮುಚ್ಚಿ ಕುಳಿತು ಇವತ್ತು ನಮ್ಮ ತಲೆಯ ಮೇಲೆ ಏತಕ್ಕೆ ಗೂಬೆ ಕೂರಿಸುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಗೊತ್ತಿಲ್ಲದೆ ಹೇಳುವುದಕ್ಕೆ ಹೋಗಬೇಡಿ. ಕನ್‌ಸಿಲಿಯೇಷನ್ ಪ್ರೊಸೀ ಡಿಂಗ್ಸ್ ಎನ್ನತಕ್ಕಂಥದ್ದು ಪ್ರಥಮ ಹೆಜ್ಜೆ. ಈಗ ಅದನ್ನು ನಡೆಸುತ್ತಿದ್ದೇವೆಂದು ಹೇಳುತ್ತಿದ್ದೀರಿ, ಮತ್ತೆ ೧ ತಿಂಗಳಿನಿಂದ ಪ್ರೊಸೆಸ್ ಮಾಡುತ್ತಿದ್ದೇವೆಂದು ಹೇಳಿದರೆ ಏನು ಅರ್ಥ ? This is the preliminary thing which you are doing. You are saying that it is being processed for the last one month. That shows that you are ignorant of the Industrial Disputes Act.

(iii) *re: Fire accident at Sogane Village Shimoga Taluk*

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಸೋಗಾನೆ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ಅಗ್ನಿ ದುರಂತದ ಬಗ್ಗೆ ಮಾನ್ಯ ಮಂತ್ರಿಗಳವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರ ಪರವಾಗಿ ಈ ಕೆಳಗಿನ ಹೇಳಿಕೆಗಳನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

On 12th February 1980, an accidental fire took place in Sogane Village, Nidige Hobli, Shimoga Taluk resulting in the destruction of 11 Houses. The total loss is estimated at Rs. 21,490 The following are the persons affected by the fire Accident :

Shriyut /Smts.

1. Nataraj bin Narayanaswamy
2. Mallappa bin Dharmappa